# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023ರ ನಿಯಮ 17(3) ರಂತೆ ಸರ್ವೆ / ಮೋಜಣಿ ಮತ್ತು ಇನ್ನಿತರ ತಾಂತ್ರಿಕ ದೋಷಗಳಿಂದ ಗುತ್ತಿಗೆ ಪ್ರದೇಶದಲ್ಲಿ ಉಂಟಾಗಿರುವ ನ್ಯೂನತೆಗಳನ್ನು ಗುತ್ತಿಗೆ ಅವಧಿಯಲ್ಲಿ ಒಂದು ಬಾರಿ ಸರಿಪಡಿಸುವ ಸಂಬಂಧ ಮಾರ್ಗಸೂಚಿಗಳು.

ಓದಲಾಗಿದೆ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ-ಎಂಎಂಎನ್/205/ 2023, ದಿನಾಂಕ 17.03.2023.
2. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಪತ್ರಗಳ ಸಂಖ್ಯೆ
   a. ಗಭೂಇ/ಉನಿ(ಖ.ಆ)/ಕಗಗು/ತಿ.ನಿ.-01/2023-24/1105, ದಿನಾಂಕ 13.06.2023.
   b. ಗಭೂಇ/ಉನಿ(ಖ.ಆ)/ಕಗಗು/ತಿ.ನಿ.-01/2023-24/4670, ದಿನಾಂಕ 04.09.2023.

*******

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಅಧಿಸೂಚನೆಯಲ್ಲಿ, ರಾಜ್ಯ ಸರ್ಕಾರವು, ದಿನಾಂಕ 17.03.2023 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ನ್ನು ಜಾರಿಗೆ ತಂದಿರುತ್ತದೆ. ಸದರಿ ತಿದ್ದುಪಡಿ ನಿಯಮಗಳ ನಿಯಮ 17(3) ರಂತೆ ಗುತ್ತಿಗೆ ಅಥವಾ ಲೈಸೆನ್ಸ್ ಪ್ರದೇಶಗಳ ಸರ್ವೆ / ಮೋಜಣಿ ಕಾರ್ಯದ ಸಂದರ್ಭದಲ್ಲಾಗುವ ತಾಂತ್ರಿಕ ದೋಷಗಳಿಂದ ಉಂಟಾಗಿರುವ ನ್ಯೂನತೆಗಳನ್ನು ಗುತ್ತಿಗೆ ಅವಧಿಯಲ್ಲಿ ಒಂದು ಬಾರಿ ಸರಿಪಡಿಸುವ ಕುರಿತು ಸರ್ಕಾರದಿಂದ ಮಾರ್ಗಸೂಚಿಗಳನ್ನು ಹೊರಡಿಸಬೇಕಾಗಿರುತ್ತದೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರಗಳಲ್ಲಿ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 17(3) ನ್ನು ಅನುಷ್ಠಾನಗೊಳಿಸುವಲ್ಲಿ ಅನುಸರಿಸಬೇಕಾಗಿರುವ ಕ್ರಮಗಳ ಬಗ್ಗೆ ಕರಡು ಮಾರ್ಗಸೂಚಿಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

3. ಈ ಹಿಂದೆ ಗುತ್ತಿಗೆ ಅಥವಾ ಲೈಸೆನ್ಸ್ ಪ್ರದೇಶಗಳ ಸರ್ವೆ / ಮೋಜಣಿ ಕಾರ್ಯ ನಡೆಸುವ ಸಂದರ್ಭದಲ್ಲಿ ಉಂಟಾಗಿರಬಹುದಾದ ಸಂಭವನೀಯ ತಾಂತ್ರಿಕ ದೋಷಗಳು.

   i. ಉಪಖನಿಜಗಳಿಗೆ ಗಣಿಗುತ್ತಿಗೆ ನೀಡುವ ಸರ್ಕಾರಿ ಜಮೀನುಗಳ ಸರ್ವೆ ನಂಬರ್ ಗಳು ಹೆಚ್ಚಿನ ವಿಸ್ತೀರ್ಣವುಳ್ಳದಾಗಿದ್ದು, Chain, Compass ಮತ್ತು Plain Table ಉಪಕರಣಗಳನ್ನು ಬಳಸಿ, ಸರ್ವೆ ನಡೆಸಿದಾಗ ಅರ್ಜಿತ ಪ್ರದೇಶದ ನಕ್ಷೆಯಂತೆ, ಶಾಶ್ವತ ಗಡಿಬಾಂದುಗಳಿಂದ ಅರ್ಜಿತ ಪ್ರದೇಶಕ್ಕೆ ತೆಗೆದುಕೊಳ್ಳುವ ಕೋನ (angle) ಮತ್ತು ದೂರದ (distance) ವ್ಯತ್ಯಾಸದಿಂದ ಗುತ್ತಿಗೆ ಪ್ರದೇಶವು ಸ್ಥಾನಪಲ್ಲಟ / ಅತಿವ್ಯಾಪ್ತಿ / ಓರೆಯಾಗಿರುವ ಸಂಭವವಿರುತ್ತದೆ.
   ii. ಜಂಟಿ ಮೋಜಣಿ ಸಮಯದಲ್ಲಿ ಸರ್ವೆ ನಂಬರ್ ಗಳ ಶಾಶ್ವತ ಗಡಿಬಾಂದುಗಳು ನಾಶಗೊಂಡು, ಸದರಿ ಗಡಿಬಾಂದುಗಳನ್ನು ನಿಖರವಾಗಿ ಗುರುತಿಸದೆ ಅಕ್ಕಪಕ್ಕದ ಜಮೀನುಗಳ ಅನುಭೋಗದ ಆಧಾರದಂತೆ ಅಂದಾಜಿನ ಮೇರೆಗೆ ಗುರುತಿಸಿ, ಸರ್ವೆ ನಡೆಸಿದಾಗ ವ್ಯತ್ಯಾಸಗಳಾಗಿರುವ ಸಾಧ್ಯತೆ ಇರುತ್ತದೆ.

iii. ಮಂಜೂರಾತಿ ನೀಡುವ ಸರ್ವೆ ನಂಬರ್ ಪ್ರದೇಶವು ವಿಸ್ತಾರವಾಗಿದ್ದು, ಸರ್ವೆ ಕಾರ್ಯ ನಿಖರವಾಗಿ ಕೈಗೊಳ್ಳಲು ಕನಿಷ್ಠ 03 ಶಾಶ್ವತ ಗಡಿಬಾಂದುಗಳನ್ನು ಆಧಾರವಾಗಿ ಇಟ್ಟುಕೊಂಡು ಸರ್ವೆ ಕಾರ್ಯ ಕೈಗೊಳ್ಳಬೇಕಾಗಿರುತ್ತದೆ. ಆದರೆ ಜಂಟಿ ಮೋಜಣಿ ಸಮಯದಲ್ಲಿ 03 ಶಾಶ್ವತ ಗಡಿಬಾಂದುಗಳನ್ನು ಆಧರಿಸಿ ಸರ್ವೆ ನಡೆಸದಿದ್ದ ಸಂದರ್ಭಗಳಲ್ಲಿ ಮಂಜೂರು ಮಾಡಲಾದ ಗುತ್ತಿಗೆ ಪ್ರಕರಣಗಳಲ್ಲಿ ಸ್ಥಾನಪಲ್ಲಟವಾಗಿರುವ ಸಂಭವವಿರುತ್ತದೆ.

iv. ಅರ್ಜಿತ ಪ್ರದೇಶಗಳು ಗುಡ್ಡಗಾಡು, ಇಳಿಜಾರು ಮತ್ತು ಎತ್ತರ ಪ್ರದೇಶದಲ್ಲಿದ್ದಾಗ ಮಂಜೂರಾತಿ ನಕ್ಷೆಯಂತೆ Chain ಮತ್ತು Plain Table ಉಪಕರಣಗಳನ್ನು ಬಳಸಿ ಅಳತೆ ಮಾಡುವ ಸಂದರ್ಭದಲ್ಲಿ ವಾಸ್ತವವಾಗಿ ನೆಲದ ಮೇಲೆ ಗುರುತಿಸುವ ಅರ್ಜಿತ ಪ್ರದೇಶಕ್ಕೂ ಮತ್ತು ಮಂಜೂರಾತಿ ನಕ್ಷೆಯಲ್ಲಿರುವ ಪ್ರದೇಶಕ್ಕೂ ಹಾಗೂ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಗಣಿಗಾರಿಕೆ ಪ್ರದೇಶಕ್ಕೆ ನಕಾಶೆಗಳಿಗೆ ತಾಳೆಯಾಗದೆ ವ್ಯತ್ಯಾಸವಾಗಿರುವ ಸಾಧ್ಯತೆ ಇರುತ್ತದೆ.

v. ಗುತ್ತಿಗೆ ಪ್ರದೇಶವು ಎರಡು ಗ್ರಾಮಗಳಿಗೆ ಹೊಂದಿಕೊಂಡಿದ್ದಲ್ಲಿ, ಅಂತಹ ಗ್ರಾಮಗಳ ಗ್ರಾಮ ನಕ್ಷೆಗಳಲ್ಲಿನ ಗಡಿಗಳು ಕೂಡದೆ ಗ್ರಾಮ ನಕ್ಷೆಗಳಲ್ಲಿನ ದೋಷದಿಂದಾಗಿ ವಾಸ್ತವದ ಅಳತೆಗೆ ವ್ಯತ್ಯಾಸ ಉಂಟಾಗಿರುವುದರಿಂದ ಕಲ್ಲುಗಣಿಗಾರಿಕೆ ಪ್ರದೇಶದ ನಕಾಶೆಗಳಲ್ಲಿ ವ್ಯತ್ಯಾಸವಾಗಿರುವ ಸಾಧ್ಯತೆ ಇರುತ್ತದೆ.

vi. ಗುತ್ತಿಗೆ / ಲೈಸೆನ್ಸ್ ಮಂಜೂರಾತಿ ನೀಡುವ ಸಂದರ್ಭದಲ್ಲಿ ಮೂಲ ಗ್ರಾಮ ನಕ್ಷೆಗಳ ನೆರಳಚ್ಚು (xerox) ಪ್ರತಿಯನ್ನು ಆಧಾರವಾಗಿಟ್ಟುಕೊಂಡು ನಕ್ಷೆ ತಯಾರಿಸುವ ಸಂದರ್ಭದಲ್ಲಿ ಗ್ರಾಮ ನಕ್ಷೆಯು ಜೆರಾಕ್ಸ್ ಪ್ರತಿ (Shrink/expand) ಆಗಿದ್ದಲ್ಲಿ, ಸದರಿ ಜೆರಾಕ್ಸ್ ಪ್ರತಿಯ ಮೂಲ ಗ್ರಾಮ ನಕ್ಷೆಯು scale ಗೆ ಅನುಗುಣವಾಗಿ ಇರುವುದಿಲ್ಲ. ಅಂತಹ ಸಂದರ್ಭದಲ್ಲಿ ಗುತ್ತಿಗೆ / ಲೈಸೆನ್ಸ್ ಪ್ರದೇಶದ ನಕ್ಷೆಗೆ ಗುತ್ತಿಗೆ / ಲೈಸೆನ್ಸ್ ಪ್ರದೇಶವು ತಾಳೆ ಹೊಂದದೆ ವ್ಯತ್ಯಾಸವಾಗಿರುವ ಸಾಧ್ಯತೆ ಇರುತ್ತದೆ.

vii. ಸರ್ವೆ ನಂಬರ್ ನ ಟಿಪ್ಪಣಿಯಲ್ಲಿರುವ (Field Measurement Book) ಅಳತೆಗೂ ಮತ್ತು ಗ್ರಾಮ ನಕ್ಷೆಯಲ್ಲಿರುವ ಸರ್ವೆ ನಂಬರ್ ನ ಅಳತೆಗೂ ಹೊಂದಾಣಿಕೆಯಾಗದಿದ್ದಲ್ಲಿ ಗುತ್ತಿಗೆ / ಲೈಸೆನ್ಸ್ ನೀಡಲಾದ ಪ್ರದೇಶವು ತಾಳೆ ಹೊಂದದೆ ವ್ಯತ್ಯಾಸವಾಗಿರುವ ಸಾಧ್ಯತೆ ಇರುತ್ತದೆ.

viii. ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, (ತಿದ್ದುಪಡಿ) ನಿಯಮಗಳು, 2013ರಲ್ಲಿ ವ್ಯವಸ್ಥಿತ ಮತ್ತು ವೈಜ್ಞಾನಿಕವಾಗಿ ಗಣಿಗಾರಿಕೆ ನಡೆಸಲು ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಕಡ್ಡಾಯಗೊಳಿಸಿದಾಗ ಕಾರ್ಯ ನಿರ್ವಹಿಸುತ್ತಿದ್ದ ಗಣಿ ಗುತ್ತಿಗೆದಾರರು ಟೋಪೋ ಮ್ಯಾಪ್ ಗಳ ಮತ್ತು ಗೂಗಲ್ ತಂತ್ರಾಂಶದ ಮೂಲಕ ಅಕ್ಷಾಂಶ-ರೇಖಾಂಶಗಳನ್ನು ಸಂಗ್ರಹಿಸಿ ಸಲ್ಲಿಸಿದ್ದು, ಇಂತಹ ಸಂದರ್ಭದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರದೇಶಗಳು ಮತ್ತು ಮಂಜೂರಾತಿ ನಕ್ಷೆ ಹಾಗೂ ಅಕ್ಷಾಂಶ-ರೇಖಾಂಶಗಳಿಗೆ ತಾಳೆಯಾಗದೆ ಇರುವುದು ಕಂಡುಬಂದಿರುತ್ತದೆ.

ix. GPS ಉಪಕರಣಗಳನ್ನು ಬಳಸಿಕೊಂಡು ಸರ್ವೆ ಕಾರ್ಯ ಕೈಗೊಂಡು ಗುತ್ತಿಗೆ ಪ್ರದೇಶಗಳನ್ನು ಗುರುತು ಮಾಡುವ ಸಂದರ್ಭದಲ್ಲಿ Satellite signal ಸಂಪರ್ಕವು ಹೆಚ್ಚಿದ್ದಷ್ಟು ನಿಖರತೆಯು ಅಧಿಕವಾಗಿರುತ್ತದೆ. ಮೋಡ ಮುಸುಕಿದ ಹಾಗೂ ಇತರೆ ಹವಮಾನ ವೈಪರೀತ್ಯ ಸಂದರ್ಭದಲ್ಲಿ GPS ದತ್ತಾಂಶವನ್ನು ನಿಖರವಾಗಿ ದಾಖಲಿಸಿಕೊಳ್ಳಲು ಕಷ್ಟಕರವಾಗುವುದರಿಂದ ಗುತ್ತಿಗೆ / ಲೈಸೆನ್ಸ್ ಪ್ರದೇಶದ ಮಂಜೂರಾತಿ ನಕ್ಷೆಯ ನಿರ್ದೇಶಾಂಕಗಳಲ್ಲಿ ವ್ಯತ್ಯಾಸವಾಗುವ ಸಾಧ್ಯತೆ ಇರುತ್ತದೆ.

x. ಮೂಲ ಮಂಜೂರಾತಿ ನಕ್ಷೆ ತಯಾರಿಸುವ ಸಂದರ್ಭದಲ್ಲಿ ಅರ್ಜಿತ ಪ್ರದೇಶಕ್ಕೆ reference point ನ ಸರ್ವೆ ನಂಬರ್ ನ್ನು ನಮೂದಿಸುವಾಗ ಆಗಿರುವ ದೋಷಗಳಿಂದ (Arithmetic Error) ಮಂಜೂರಾತಿ ಪ್ರದೇಶ ಸ್ಥಾನಪಲ್ಲಟವಾಗುವ ಸಾಧ್ಯತೆ ಇರುತ್ತದೆ. ಮುಂದುವರೆದು, GPS ನಿರ್ದೇಶಾಂಕಗಳನ್ನು ಸಂಗ್ರಹಿಸುವ ಸಂದರ್ಭದಲ್ಲಿ Map Datum ನ್ನು ನಕ್ಷೆಗಳಲ್ಲಿ ನಮೂದಿಸದಿರುವ ಕಾರಣ ಗುತ್ತಿಗೆ/License ಪ್ರದೇಶಗಳ ಸ್ಥಾನ ಪಲ್ಲಟವಾಗುವ ಸಾಧ್ಯತೆಗಳಿರುತ್ತದೆ.

xi. ಗ್ರಾಮ ನಕಾಶೆಯಲ್ಲಿ ಗುರುತಿಸಲಾದ (Map North) ಉತ್ತರ ದಿಕ್ಕಿಗೂ ಹಾಗೂ ಕ್ಷೇತ್ರದಲ್ಲಿರುವಂತೆ (Field North) ಉತ್ತರ ದಿಕ್ಕಿಗೂ ವ್ಯತ್ಯಾಸವಾಗಿದ್ದ ಸಂದರ್ಭದಲ್ಲಿ, ಇದನ್ನು ಪರಿಗಣಿಸದೇ ಸರ್ವೆ ನಡೆಸಿರುವುದರಿಂದ ಕೋನ (Angle) ಹಾಗೂ ದೂರ (Distance)ಗಳ ವ್ಯತ್ಯಾಸವಾಗಿ ಸ್ಥಾನ ಪಲ್ಲಟವಾಗಿರುವ ಸಾಧ್ಯತೆಗಳು ಇರುತ್ತವೆ.

xii. ಪ್ರಸ್ತುತ, ಚಾಲ್ತಿ ನಿಯಮಗಳಂತೆ ಸದರಿ ಗುತ್ತಿಗೆ/ಲೈಸೆನ್ಸ್ ಗಳ ನವೀಕರಣ, ಪರಿಭಾವಿತ ಅವಧಿ ವಿಸ್ತರಣೆ ಮಾಡುವ ಸಂದರ್ಭಗಳಲ್ಲಿ ಗುತ್ತಿಗೆ ಪ್ರದೇಶಗಳ ಮಂಜೂರಾತಿ ನಕ್ಷೆಯಂತೆ DGPS / Total Station ಗಳಂತಹ ಆಧುನಿಕ ಸರ್ವೆ ಉಪಕರಣಗಳನ್ನು ಬಳಸಿ, ಸರ್ವೆ ನಡೆಸುವ ಸಂದರ್ಭದಲ್ಲಿ ಕೆಲವು ಉಪಖನಿಜ ಗುತ್ತಿಗೆ / ಲೈಸನ್ಸ್ ಪ್ರದೇಶಗಳು ಮೂಲ ಮಂಜೂರಾತಿ ನಕ್ಷೆಗೆ ಹೋಲಿಸಿದಲ್ಲಿ ಸ್ಥಾನಪಲ್ಲಟ (displacement), ಅತಿವ್ಯಾಪ್ತಿ (Overlap) ಮತ್ತು ಓರೆ (tilt) ಯಾಗಿರುವುದು ಕಂಡು ಬಂದಿರುತ್ತದೆ.

4. ಈ ಹಿನ್ನೆಲೆಯಲ್ಲಿ, ಇತರೆ ಯಾವುದಾದರೂ ಕಾರಣಗಳಿಂದ ಮೂಲ ಮಂಜೂರಾತಿ ನಕ್ಷೆಗೆ ಅನುಗುಣವಾಗಿಲ್ಲದ ಚಾಲ್ತಿ ಗುತ್ತಿಗೆ/ಲೈಸೆನ್ಸ್ ಪ್ರದೇಶಗಳಿಗೆ ಕಾರಣಗಳನ್ನು ಲಿಖಿತವಾಗಿ ದಾಖಲಿಸಿ, ಸದರಿ ನ್ಯೂನತೆಗಳನ್ನು ಗುತ್ತಿಗೆ ಅಥವಾ ಲೈಸೆನ್ಸ್ ಚಾಲ್ತಿಯಲ್ಲಿರುವ ಅವಧಿಯಲ್ಲಿ ಒಂದು ಬಾರಿಗೆ ಮಾತ್ರ ಸರಿಪಡಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸುವಂತೆ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 17(3) ರಡಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಐ-ಎಂಎಂಎನ್/106/2023, ಬೆಂಗಳೂರು, ದಿನಾಂಕ 11.09.2023.**

5. ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 17(3) ರಂತೆ ಗುತ್ತಿಗೆ ಅಥವಾ ಲೈಸೆನ್ಸ್ ಪ್ರದೇಶಗಳ ಸರ್ವೆ / ಮೋಜಣಿ ಕಾರ್ಯದ ಸಂದರ್ಭದಲ್ಲಿ ತಾಂತ್ರಿಕ ದೋಷಗಳಿಂದಾದ ನ್ಯೂನತೆಗಳನ್ನು ಗುತ್ತಿಗೆ ಅಥವಾ ಲೈಸೆನ್ಸ್ ಚಾಲ್ತಿಯಲ್ಲಿರುವ ಅವಧಿಯಲ್ಲಿ ಒಂದು ಬಾರಿಗೆ ಮಾತ್ರ ಸರಿಪಡಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅನುಸರಿಸಲು ಆದೇಶಿಸಿದೆ.

**ಮಾರ್ಗಸೂಚಿಗಳು:**

I. ಉಪಖನಿಜ ಗಣಿ ಗುತ್ತಿಗೆ / ಕ್ವಾರಿಯಿಂಗ್ ಲೈಸೆನ್ಸ್ ಪ್ರದೇಶಗಳ ಮೋಜಣಿ ಕಾರ್ಯದ ಸಂದರ್ಭದಲ್ಲಿ ಉಂಟಾಗಿರುವ ತಾಂತ್ರಿಕ ದೋಷಗಳನ್ನು ಸರಿಪಡಿಸಿ ಗುತ್ತಿಗೆ ಪ್ರದೇಶಗಳನ್ನು ಸ್ಥಿರಗೊಳಿಸಲು ಅನುಸರಿಸಬೇಕಾದ ಮಾನದಂಡ / ಮಾರ್ಗಸೂಚಿಗಳು.

A. ಮಂಜೂರಾತಿ ನಕ್ಷೆಯಂತೆ ಕ್ಷೇತ್ರದಲ್ಲಿ ಗಣಿ ಕಾರ್ಯ ನಿರ್ವಹಿಸದೇ ನಕ್ಷೆಯಲ್ಲಿರುವ ಗುತ್ತಿಗೆ ಪ್ರದೇಶದ GPS co-ordinate ಗಳಂತೆ ಗುತ್ತಿಗೆದಾರರು ಗಣಿ ಕಾರ್ಯ ನಿರ್ವಹಿಸುತ್ತಿದ್ದಲ್ಲಿ, ಸದರಿ ಗುತ್ತಿಗೆ ಪ್ರದೇಶಗಳ GPS co-ordinate ಗಳಂತೆ ಗುತ್ತಿಗೆ ಪ್ರದೇಶವನ್ನು ಮೂಲ ಗುತ್ತಿಗೆ ವಿಸ್ತೀರ್ಣವನ್ನು ಮೀರದಂತೆ ಸ್ಥಿರಗೊಳಿಸುವುದು.

ಒಂದು ವೇಳೆ ಹಾಗೆಯೇ ಸ್ಥಿರಗೊಳಿಸಲಾದ ಪ್ರದೇಶವು ಇನ್ನೊಂದು ಗಣಿ ಗುತ್ತಿಗೆ ಪ್ರದೇಶದ ಮೇಲೆ ಅತಿವ್ಯಾಪ್ತಿಯಾಗಿದ್ದಲ್ಲಿ ಮೂಲ ಮಂಜೂರಾತಿ ನಕ್ಷೆಯಂತೆ ಗುತ್ತಿಗೆ ಪ್ರದೇಶವನ್ನು ಸ್ಥಿರಗೊಳಿಸಿ, ನಿಯಮಾನುಸಾರ ಕ್ರಮ ವಹಿಸುವುದು.

B. ಮಂಜೂರಾತಿ ಗುತ್ತಿಗೆ ಪ್ರದೇಶದ ನಕ್ಷೆಯಂತೆ ಗಣಿ ಕಾರ್ಯ ನಿರ್ವಹಿಸುತ್ತಿದ್ದು, ನಕ್ಷೆಯಲ್ಲಿನ ಅಕ್ಷಾಂಶ-ರೇಖಾಂಶಗಳು ಪ್ರಸ್ತುತ ಗಣಿಗಾರಿಕೆ ನಡೆಸುತ್ತಿರುವ ಪ್ರದೇಶಕ್ಕೆ ಅನುಗುಣವಾಗಿ ತಾಳೆ ಹೊಂದದೆ ವ್ಯತ್ಯಾಸಗೊಂಡಿರುವ ಪ್ರಕರಣಗಳಲ್ಲಿ, ಮೂಲ ನಕ್ಷೆಯಂತೆ ಗಣಿ ಕಾರ್ಯ ನಿರ್ವಹಿಸುತ್ತಿರುವ ಪ್ರದೇಶಕ್ಕೆ ಅನುಗುಣವಾಗಿ DGPS ನಿರ್ದೇಶಾಂಕಗಳನ್ನು ಸ್ಥಿರಗೊಳಿಸುವುದು.

C. ಮಂಜೂರಾತಿ ನಕ್ಷೆಯಂತೆ ಅಥವಾ ನಕ್ಷೆಯಲ್ಲಿನ ಅಕ್ಷಾಂಶ-ರೇಖಾಂಶಗಳನ್ವಯ ಗುತ್ತಿಗೆದಾರರು ಗಣಿ ಕಾರ್ಯ ನಿರ್ವಹಿಸದೇ, ಗುತ್ತಿಗೆ ಮಂಜೂರಾದ ಸರ್ವೆ ನಂಬರ್, ಗ್ರಾಮ, ಮತ್ತು ವಿಸ್ತೀರ್ಣಕ್ಕೆ ಅನುಗುಣವಾಗಿ ಸ್ಥಾನಪಲ್ಲಟಗೊಂಡು ಗಣಿ ಕಾರ್ಯ ನಿರ್ವಹಿಸುತ್ತಿದ್ದಲ್ಲಿ, ಸದರಿ ಪ್ರದೇಶಕ್ಕೆ ಗುತ್ತಿಗೆಯನ್ನು ಸ್ಥಿರಗೊಳಿಸುವುದು. ಒಂದು ವೇಳೆ ಹಾಗೆ ಸ್ಥಿರಗೊಳಿಸಲಾದ ಪ್ರದೇಶವು ಇನ್ನೊಂದು ಗಣಿ ಗುತ್ತಿಗೆ ಪ್ರದೇಶದ ಮೇಲೆ ಅತಿವ್ಯಾಪ್ತಿಯಾಗಿದ್ದಲ್ಲಿ ಮೂಲ ಮಂಜೂರಾತಿ ನಕ್ಷೆಯಂತೆ ಗುತ್ತಿಗೆ ಪ್ರದೇಶವನ್ನು ಸ್ಥಿರಗೊಳಿಸಿ, ನಿಯಮಾನುಸಾರ ಕ್ರಮವಹಿಸುವುದು.

D. ಮಂಜೂರಾತಿ ಕಲ್ಲುಗಣಿ ಗುತ್ತಿಗೆ ಪ್ರದೇಶಗಳು ಕಾರ್ಯ ನಿರ್ವಹಿಸುತ್ತಿರುವ ಪ್ರದೇಶಗಳಲ್ಲಿ ಒಂದಕ್ಕೊಂದು ಅತಿವ್ಯಾಪ್ತಿ (overlap) ಯಾಗಿದ್ದಲ್ಲಿ ಸದರಿ ಗುತ್ತಿಗೆಗಳ ಗುತ್ತಿಗೆದಾರರ ಸಮ್ಮುಖದಲ್ಲಿ ಪರಿಶೀಲಿಸಿ, ಜಂಟಿ ಸರ್ವೆ ನಡೆಸಿ, ಗುತ್ತಿಗೆದಾರರ ಒಪ್ಪಿಗೆ ಪಡೆದು, ಅವಶ್ಯವಿದ್ದಲ್ಲಿ ಗುತ್ತಿಗೆ ಪ್ರದೇಶವನ್ನು ಕಡಿತಗೊಳಿಸಿ ಸ್ಥಿರಗೊಳಿಸುವುದು.

E. ಮಂಜೂರಾದ ಕಲ್ಲುಗಣಿ ಗುತ್ತಿಗೆ ಪ್ರದೇಶಗಳ ನಕ್ಷೆಯನ್ನು ಸ್ಥಿರಗೊಳಿಸುವ ಸಂದರ್ಭದಲ್ಲಿ ಮಂಜೂರಾತಿ ಗುತ್ತಿಗೆ ಪ್ರದೇಶದ ನಕ್ಷೆಯು ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಕೋರಿ ಸಲ್ಲಿಸಲಾದ ಅರ್ಜಿಯ ಪ್ರದೇಶದ ಮೇಲೆ ಅತಿವ್ಯಾಪ್ತಿಯಾಗಿದ್ದಲ್ಲಿ, ಅಂತಹ ಸಂದರ್ಭದಲ್ಲಿ ಗುತ್ತಿಗೆದಾರರಿಗೆ ಆದ್ಯತೆ ನೀಡಿ ಸ್ಥಿರಗೊಳಿಸಲು ಕ್ರಮ ವಹಿಸುವುದು.

F. ಗುತ್ತಿಗೆ ಪ್ರದೇಶ ಅಥವಾ ಸರ್ಕಾರಿ ಜಮೀನಿನ ಮೇಲೆ ಕ್ವಾರಿಯಿಂಗ್ ಲೈಸೆನ್ಸ್ ಪ್ರದೇಶವು ಅತಿವ್ಯಾಪ್ತಿಯಾಗಿದ್ದಲ್ಲಿ, ಅಂತಹ ಪ್ರಕರಣವನ್ನು ನಿಯಮ 17(3) ರಡಿ ಪರಿಗಣಿಸತಕ್ಕದ್ದಲ್ಲ ಹಾಗೂ ಅಂತಹ ಪ್ರಕರಣವನ್ನು ಒತ್ತುವರಿ ಎಂದು ಪರಿಗಣಿಸಿ ನಿಯಮಾನುಸಾರ ಕ್ರಮ ವಹಿಸುವುದು.

II. ಗುತ್ತಿಗೆ / ಲೈಸೆನ್ಸ್ ಪ್ರದೇಶಗಳ ಮೋಜಣಿ ಕಾರ್ಯದ ಸಂದರ್ಭದಲ್ಲಿ ಉಂಟಾಗಿರುವ ತಾಂತ್ರಿಕ ದೋಷಗಳನ್ನು ಮೇಲಿನ ಮಾರ್ಗಸೂಚಿಗಳಂತೆ ಸರಿಪಡಿಸಿ ಗುತ್ತಿಗೆ ಪ್ರದೇಶಗಳನ್ನು ಸ್ಥಿರಗೊಳಿಸಲು ಸಂಬಂಧಿಸಿದ ಉಪನಿರ್ದೇಶಕರು/ಹಿರಿಯ ಭೂವಿಜ್ಞಾನಿಗಳು ಕೈಗೊಳ್ಳಬೇಕಾದ ಕ್ರಮಗಳು.

a) ಉಪಖನಿಜ ಗಣಿ ಗುತ್ತಿಗೆ / ಕ್ವಾರಿಯಿಂಗ್ ಲೈಸೆನ್ಸ್ ಪ್ರದೇಶಗಳ ಪರಿಷ್ಕರಣೆ ನಕ್ಷೆಯು ಮಂಜೂರು ಮಾಡಲಾದ ಪ್ರದೇಶದ ಗ್ರಾಮ, ಸರ್ವೆ ನಂಬರ್, ವಿಸ್ತೀರ್ಣಕ್ಕೆ ಅನುಗುಣವಾಗಿ ಇರತಕ್ಕದ್ದು.

b) ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದಿಂದ ನಡೆಸಲಾಗುತ್ತಿರುವ DGPS/Drone ಸರ್ವೆ ಕಾರ್ಯದ ನಂತರ ಪರಿಶೀಲಿಸಿಕೊಂಡು ಮೇಲೆ ಪ್ರಸ್ತಾಪಿಸಲಾದ ನ್ಯೂನ್ಯತೆಗಳಿದ್ದಲ್ಲಿ, ಉಪಖನಿಜ ಗುತ್ತಿಗೆ / ಕ್ವಾರಿಯಿಂಗ್ ಲೈಸೆನ್ಸ್ ಪ್ರದೇಶಗಳನ್ನು ಒಂದು ಬಾರಿ ಸ್ಥಿರಗೊಳಿಸಲು ಕ್ರಮವಹಿಸುವುದು.

c) ಉಪ ಖನಿಜ ಗಣಿ ಗುತ್ತಿಗೆ / ಲೈಸೆನ್ಸ್ ಪ್ರದೇಶದ ನಕ್ಷೆಯನ್ನು ನಿಯಮ-17(3) ರಂತೆ, ಸ್ಥಿರೀಕರಿಸುವ ಸಂಬಂಧ ಅಕ್ಕಪಕ್ಕದ ಗುತ್ತಿಗೆ / ಲೈಸೆನ್ಸ್ ಪ್ರದೇಶಗಳು ಅತಿವ್ಯಾಪ್ತಿಯಾಗುವ ಸಂಭವದ ಬಗ್ಗೆ ಪರಿಶೀಲಿಸಿಕೊಂಡು ಮೂಲ ಗ್ರಾಮ ನಕ್ಷೆ / ಟಿಪ್ಪಣಿ (FMB) ಅಳತೆಗೆ ಅನುಗುಣವಾಗಿ ಗುತ್ತಿಗೆ/ ಲೈಸೆನ್ಸ್ ಪ್ರದೇಶಗಳನ್ನು ಸ್ಥಿರೀಕರಿಸಲು ಕ್ರಮ ವಹಿಸುವುದು.

d) ಗುತ್ತಿಗೆ / ಲೈಸೆನ್ಸ್ ಪ್ರದೇಶಗಳ ಸ್ಥಿರಗೊಳಿಸುವ ವಿಸ್ತೀರ್ಣವು ಮೂಲ ಗುತ್ತಿಗೆ ವಿಸ್ತೀರ್ಣವನ್ನು ಮೀರತಕ್ಕದ್ದಲ್ಲ. ಒಂದು ವೇಳೆ ಗುತ್ತಿಗೆ / ಲೈಸೆನ್ಸ್ ದಾರರು ಮೂಲ ವಿಸ್ತೀರ್ಣಕ್ಕಿಂತ ಅಧಿಕ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಿದ್ದಲ್ಲಿ, ಹೆಚ್ಚುವರಿ ಪ್ರದೇಶಕ್ಕೆ ನಿಯಮಾನುಸಾರ ಕ್ರಮ ವಹಿಸುವುದು.

e) ಮೇಲೆ ವಿವರಿಸಿರುವ ಮಾನದಂಡಗಳಂತೆ ಗುತ್ತಿಗೆ / ಲೈಸೆನ್ಸ್ ಪ್ರದೇಶಗಳ ಮಂಜೂರಾತಿ ನಕ್ಷೆಗಳನ್ನು ಸ್ಥಿರೀಕರಿಸುವ ಸಂದರ್ಭದಲ್ಲಿ ಭೌತಿಕವಾಗಿ ಗಣಿಗಾರಿಕೆ ನಡೆಸಿರುವ ಪ್ರದೇಶವನ್ನು ಮೂಲ ಗ್ರಾಮ ನಕ್ಷೆ / ಟಿಪ್ಪಣಿ (FMB) ಅಳತೆಗಳನ್ವಯ ತಿದ್ದುಪಡಿ ನಕ್ಷೆಯನ್ನು ಭೂದಾಖಲೆ ಇಲಾಖೆಯ ಸಕ್ಷಮ ಅಧಿಕಾರಿಗಳಿಂದ ದೃಢೀಕರಿಸಿದ ನಂತರವೇ ಅಂತಿಮಗೊಳಿಸುವುದು.

III. ಮೇಲ್ಕಂಡ ವಿವರಿಸಿರುವ ಅಂಶಗಳ ಆಧಾರದ ಮೇರೆಗೆ ಕ್ಷೇತ್ರದಲ್ಲಿ ಪ್ರಕರಣವಾರು ಯಾವ ಅಂಶವು ಅನುಗುಣವಾಗಿರುತ್ತದೆಯೋ ಅದರನ್ವಯ ಚಾಲ್ತಿಯಲ್ಲಿರುವ ಉಪಖನಿಜ ಗಣಿ ಗುತ್ತಿಗೆ / ಕ್ವಾರಿಯಿಂಗ್ ಲೈಸೆನ್ಸ್ ಪ್ರದೇಶಗಳನ್ನು ಸ್ಥಿರಗೊಳಿಸುವ ಸಂಬಂಧ ಗಣಿ ಗುತ್ತಿಗೆ/ಕ್ವಾರಿಯಿಂಗ್ ಲೈಸೆನ್ಸ್‌ದಾರರ ಸಮಕ್ಷಮ ಕಂದಾಯ ಮತ್ತು ಭೂದಾಖಲೆಗಳ ಇಲಾಖೆಯ ಸಹಯೋಗ ದೊಂದಿಗೆ ಸಂಬಂಧಪಟ್ಟ ಉಪ ನಿರ್ದೇಶಕರು/ಹಿರಿಯ ಭೂವಿಜ್ಞಾನಿ ಯವರು, DGPS/Total Station ಉಪಕರಣದೊಂದಿಗೆ ಜಂಟಿಯಾಗಿ ಸರ್ವೆ ನಡೆಸಿ, ನಿರ್ದೇಶಾಂಕಗಳನ್ನು ನಮೂದಿಸಿ, ವಿವರವಾದ ಸಕಾರಣದೊಂದಿಗೆ ಜಂಟಿ ಮೋಜಣಿ ವರದಿ ಮತ್ತು ಪರಿಷ್ಕೃತ ಜಂಟಿ ಮೋಜಣಿ ನಕ್ಷೆ ತಯಾರಿಸುವುದು.

IV. ಉಪನಿರ್ದೇಶಕರು / ಹಿರಿಯ ಭೂವಿಜ್ಞಾನಿ ರವರು ತಿದ್ದುಪಡಿ / ಪರಿಷ್ಕೃತ ನಕ್ಷೆಯನ್ನು ಸ್ಥಿರಗೊಳಿಸಲು ನಿರ್ದಿಷ್ಟ ಉಪ ಖನಿಜದ ಗಣಿ ಗುತ್ತಿಗೆಗಳಿಗೆ ಆಯುಕ್ತರು/ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ಇವರಿಂದ ಅನುಮೋದನೆ ಪಡೆಯುವುದು.

V. ನಿರ್ದಿಷ್ಟವಲ್ಲದ ಉಪ ಖನಿಜಗಳಿಗೆ ಉಪ ನಿರ್ದೇಕರು/ಹಿರಿಯ ಭೂವಿಜ್ಞಾನಿ ರವರು ಸ್ಥಿರಗೊಳಿಸಿದ ಪರಿಷ್ಕೃತ ನಕ್ಷೆಗೆ ಅನುಮೋದನೆ ನೀಡುವುದು.

VI. ಸ್ಥಿರಗೊಳಿಸಿ ಅನುಮೋದನೆಗೊಂಡ ನಕ್ಷೆಗಳನ್ನು ಗುತ್ತಿಗೆ / ಲೈಸೆನ್ಸ್ ನ ಅಧಿಸೂಚನೆ ನಕ್ಷೆ ಮತ್ತು ಅಮಲ್ಜಾರಿ ನಕ್ಷೆಯನ್ನು ಪರಿಷ್ಕರಿಸಿ ಕಡತದಲ್ಲಿ ದಾಖಲಿಸಿ, ಸಂಬಂಧಪಟ್ಟ ಗುತ್ತಿಗೆ / ಲೈಸೆನ್ಸ್ ದಾರರಿಗೆ ಮತ್ತು ಸಂಬಂದಿಸಿದ ಇಲಾಖೆಗಳಿಗೆ ಮಾಹಿತಿ ನೀಡುವುದು. ಪರಿಷ್ಕರಿಸಿದ ಉಪಖನಿಜ ಗಣಿ ಗುತ್ತಿಗೆ / ಕ್ವಾರಿಯಿಂಗ್ ಲೈಸೆನ್ಸ್ ನಕ್ಷೆ ಮತ್ತು DGPS ನಿರ್ದೇಶಾಂಕಗಳಿಗೆ ಅನುಗುಣವಾಗಿ ಪರಿಷ್ಕೃತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರವನ್ನು ಕಡ್ಡಾಯವಾಗಿ ಪಡೆಯುವುದು.

VII. ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023ರ ನಿಯಮ 17(3) ರನ್ವಯ ಈ ಮಾರ್ಗಸೂಚಿಗಳು ಜಾರಿಗೆ ಬಂದ ದಿನಾಂಕದಿಂದ 24 ತಿಂಗಳೊಳಗಾಗಿ ಅಥವಾ ಗುತ್ತಿಗೆ / ಲೈಸೆನ್ಸ್ ಮುಕ್ತಾಯದ ಅವಧಿ ಇವುಗಳಲ್ಲಿ ಯಾವುದು ಮೊದಲೋ ಆ ಅವಧಿಯೊಳಗೆ ಕಡ್ಡಾಯವಾಗಿ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಕ್ರಮವಹಿಸುವುದು ಮತ್ತು ತಿದ್ದುಪಡಿ

ನಿಯಮಗಳು, 2023ರ ಪೂರ್ವದಲ್ಲಿ ಮಂಜೂರಾದ ಗಣಿ ಗುತ್ತಿಗೆಗಳಿಗೆ ಮಾತ್ರ ಈ ಮಾರ್ಗಸೂಚಿಯು ಅನ್ವಯಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಶಿವಪ್ರಕಾಶ)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಗಣಿ).

**PR-365**

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರ ನಿಯಮ 3-F ರಂತೆ ಸರ್ಕಾರಿ ಜಮೀನುಗಳಲ್ಲಿ ಹರಾಜು ರಹಿತವಾಗಿ ಕಟ್ಟಡ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಸಂಬಂಧಿಸಿದ ಮಾರ್ಗಸೂಚಿಗಳು.

**ಓದಲಾಗಿದೆ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 418 ಎಂಎಂಎನ್ 2015 (ಭಾಗ-II), ದಿನಾಂಕ 12.08.2016.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ-ಎಂಎಂಎನ್/205/2023, ದಿನಾಂಕ 17.03.2023.
3. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಪತ್ರಗಳ ಸಂಖ್ಯೆ
   a. ಗಭೂಇ/ಉನಿ(ಖ.ಆ)/ಕಗಗು/ತಿ.ನಿ.-01/2023-24/1105, ದಿನಾಂಕ 13.06.2023.
   b. ಗಭೂಇ/ಉನಿ(ಖ.ಆ)/ಕಗಗು/ತಿ.ನಿ.-01/2023-24/4670, ದಿನಾಂಕ 04.09.2023.

*******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ಮತ್ತು (2) ರ ಅಧಿಸೂಚನೆಯಲ್ಲಿ, ರಾಜ್ಯ ಸರ್ಕಾರವು, ದಿನಾಂಕ 17.03.2023 ರಂದು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ಗೆ ತಿದ್ದುಪಡಿ ತಂದಿರುತ್ತದೆ. ಸದರಿ ತಿದ್ದುಪಡಿ ನಿಯಮಗಳ ನಿಯಮ 3-F ರಡಿ ಅನುಸೂಚಿತ ಜಾತಿ / ಅನುಸೂಚಿತ ಪಂಗಡಕ್ಕೆ ಸೇರಿದ ವ್ಯಕ್ತಿ ಅಥವಾ ನೋಂದಾಯಿತ ಸಂಘ, ಪಾರಂಪರಿಕವಾಗಿ ಕಲ್ಲು ಗಣಿಗಾರಿಕೆಯನ್ನೇ ಅವಲಂಬಿಸಿ ಜೀವನ ಸಾಗಿಸುತ್ತಿರುವ ಅನುಸೂಚಿತ ಜಾತಿ / ಅನುಸೂಚಿತ ಪಂಗಡಕ್ಕೆ ಸೇರಿದ ವ್ಯಕ್ತಿ ಮತ್ತು ನೋಂದಾಯಿತ ಸಂಘಗಳು, ವಿಕಲಚೇತನರಿಗೆ ಮತ್ತು ಪಾರಂಪರಿಕವಾಗಿ ಕಟ್ಟಡ ಕಲ್ಲು ಗಣಿಗಾರಿಕೆ ನಿರ್ವಹಿಸುತ್ತಿರುವ ಹಾಗೂ ಆರ್ಥಿಕ ದುರ್ಬಲ ವರ್ಗದವರಿಗೆ ಹರಾಜು ರಹಿತವಾಗಿ ಮಾನವ ಶ್ರಮದಿಂದ ಕಟ್ಟಡ ಕಲ್ಲುಗಣಿಗಾರಿಕೆ ನಡೆಸಲು ಗುತ್ತಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರಗಳಲ್ಲಿ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರಂತೆ ಪ್ರಥಮ ಹಂತದಲ್ಲಿ ಆದ್ಯತೆ ಮೇರೆಗೆ ಅನುಸೂಚಿತ ಜಾತಿ / ಅನುಸೂಚಿತ ಪಂಗಡಕ್ಕೆ / ಪಾರಂಪರಿಕವಾಗಿ ಕಟ್ಟಡ ಕಲ್ಲುಗಣಿಗಾರಿಕೆ ನಿರ್ವಹಿಸುತ್ತಿರುವ ಹಾಗೂ ಆರ್ಥಿಕ ದುರ್ಬಲ ವರ್ಗಕ್ಕೆ ಸೇರಿದ ನೋಂದಾಯಿತ ಸಂಘ ಮತ್ತು ವಿಕಲಚೇತನರಿಗೆ ಮಾತ್ರ ಗುತ್ತಿಗೆ

ಮಂಜೂರಾತಿಗೆ ಸಂಬಂಧಿಸಿದಂತೆ ನಿಯಮಗಳನ್ನು ಅನುಷ್ಠಾನಗೊಳಿಸುವಲ್ಲಿ ಅನುಸರಿಸುವ ಕ್ರಮಗಳ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸುವಂತೆ ಕೋರುತ್ತಾ, ಕರಡು ಮಾರ್ಗಸೂಚಿಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

3. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ಮತ್ತು ತಿದ್ದುಪಡಿ ನಿಯಮಗಳು, 2023 ರ ನಿಯಮ 3-F ರನ್ವಯ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಐ-ಎಂಎಂಎನ್/106/2023, ಬೆಂಗಳೂರು, ದಿನಾಂಕ:11.09.2023.**

4. ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಥಮ ಹಂತದಲ್ಲಿ ಆಧ್ಯತೆ ಮೇರೆಗೆ ಮಾನವ ಶ್ರಮದಿಂದ ಕಟ್ಟಡ ಕಲ್ಲು ಗಣಿಗಾರಿಕೆ ನಿರ್ವಹಿಸುವ ಅನುಸೂಚಿತ ಜಾತಿ / ಅನುಸೂಚಿತ ಪಂಗಡಕ್ಕೆ ಸೇರಿದ / ಪಾರಂಪರಿಕವಾಗಿ ಕಲ್ಲು ಗಣಿಗಾರಿಕೆಯನ್ನೇ ಅವಲಂಬಿಸಿ ಜೀವನ ಸಾಗಿಸುತ್ತಿರುವ ಹಾಗೂ ಆರ್ಥಿಕ ದುರ್ಬಲ ವರ್ಗದ ನೋಂದಾಯಿತ ಸಂಘಗಳಿಗೆ ಮತ್ತು ವಿಕಲಚೇತನರಿಗೆ ಮಾತ್ರ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ಮತ್ತು ತಿದ್ದುಪಡಿ ನಿಯಮಗಳು, 2023ರ ನಿಯಮ 3-F ರಡಿ ಗುತ್ತಿಗೆ ಮಂಜೂರಾತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಮಾರ್ಗಸೂಚಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

**ಮಾರ್ಗಸೂಚಿಗಳು:**

(i) ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023, ನಿಯಮ- 3-F ರಂತೆ ಕಲ್ಲುಗಣಿ ಗುತ್ತಿಗೆ ಮಂಜೂರು ಮಾಡಲು ಜಿಲ್ಲೆಯಲ್ಲಿ ಗುರುತಿಸಲಾದ ಒಟ್ಟು ವಿಸ್ತೀರ್ಣವು ನಿಯಮ 31-B(2) ರಂತೆ ಹರಾಜು ಮೂಲಕ ಕಲ್ಲುಗಣಿ ಗುತ್ತಿಗೆ ಮಂಜೂರು ಮಾಡಲು ಉದ್ದೇಶಿಸಿ ಗುರುತಿಸುವ ವಿಸ್ತೀರ್ಣದ ಶೇಕಡ 25 ರಷ್ಟು ಪ್ರದೇಶ ಇರತಕ್ಕದ್ದು.

(ii) ನಿಯಮ 3-F ರಡಿ ವೈಯಕ್ತಿಕ ಅರ್ಜಿಗಳಾಗಿದ್ದಲ್ಲಿ ಕನಿಷ್ಠ 02-00 ಎಕರೆಯಿಂದ ಗರಿಷ್ಟ 05-00 ಎಕರೆವರೆಗೆ ಹಾಗೂ ನೋಂದಾಯಿತ ಸಂಘಗಳಾಗಿದ್ದಲ್ಲಿ ಕನಿಷ್ಠ 05-00 ಎಕರೆಯಿಂದ ಗರಿಷ್ಟ 10-00 ಎಕರೆ ವರೆಗಿನ ವಿಸ್ತೀರ್ಣದ ಕಟ್ಟಡ ಕಲ್ಲು ನಿಕ್ಷೇಪದ ಬ್ಲಾಕುಗಳನ್ನು ಗುರುತಿಸುವುದು.

(iii) ನಿಯಮ 3-F ರಡಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಉದ್ದೇಶಿಸಿ ಗುರುತಿಸುವ ಕಟ್ಟಡ ಕಲ್ಲು ನಿಕ್ಷೇಪದ ಒಂದು ಬ್ಲಾಕಿನ ವಿಸ್ತೀರ್ಣ ಕನಿಷ್ಟ 02-00 ಎಕರೆ ಮತ್ತು ಗರಿಷ್ಟ 10-00 ಎಕರೆ ಮೀರುವಂತಿಲ್ಲ.

(iv) ಪ್ರಥಮ ಹಂತದಲ್ಲಿ ಆಧ್ಯತೆ ಮೇರೆಗೆ ಅನುಸೂಚಿತ ಜಾತಿ / ಅನುಸೂಚಿತ ಪಂಗಡಕ್ಕೆ ಸೇರಿದ / ಪಾರಂಪರಿಕವಾಗಿ ಕಟ್ಟಡ ಕಲ್ಲು ಗಣಿಗಾರಿಕೆ ನಿರ್ವಹಿಸುತ್ತಿರುವ ಹಾಗೂ ಆರ್ಥಿಕ ದುರ್ಬಲ ವರ್ಗಕ್ಕೆ ಸೇರಿದ ನೋಂದಾಯಿತ ಸಂಘ ಮತ್ತು ವಿಕಲಚೇತನರಿಗೆ ಮಾತ್ರ ಗುತ್ತಿಗೆ ಮಂಜೂರಾತಿಗೆ ಬ್ಲಾಕ್ ಗಳನ್ನು ಗುರುತಿಸಿ ನಿಯಮಾನುಸಾರ ಮೀಸಲಿರಿಸುವುದು.

(v) ಜಿಲ್ಲೆಯಲ್ಲಿ ಗುರುತಿಸಿದ ಕಟ್ಟಡ ಕಲ್ಲಿನ ನಿಕ್ಷೇಪದ ಬ್ಲಾಕುಗಳಿಗೆ ನಿಯಮ 8(5) ರಲ್ಲಿ ನಿರ್ದಿಷ್ಟಪಡಿಸಿರುವಂತೆ, ಕಂದಾಯ ಮತ್ತು ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರಗಳು ಹಾಗೂ ಕಾರ್ಯ ವ್ಯಾಪ್ತಿಯ ಭೂವಿಜ್ಞಾನಿಯವರಿಂದ ತಾಂತ್ರಿಕ ವರದಿಯನ್ನು ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು ಪಡೆಯುವುದು.

(vi) ನಿಯಮ 8(5) ರಂತೆ ನಿರಾಕ್ಷೇಪಣಾ ಪತ್ರಗಳು ಸ್ವೀಕೃತವಾದ ನಂತರ ಪ್ರಥಮ ಹಂತದಲ್ಲಿ ಆಧ್ಯತೆ ಮೇರೆಗೆ ಅನುಸೂಚಿತ ಜಾತಿ / ಅನುಸೂಚಿತ ಪಂಗಡಕ್ಕೆ / ಪಾರಂಪರಿಕವಾಗಿ ಕಟ್ಟಡ ಕಲ್ಲು ಗಣಿಗಾರಿಕೆ ನಿರ್ವಹಿಸುತ್ತಿರುವ ಹಾಗೂ ಆರ್ಥಿಕ ದುರ್ಬಲ ವರ್ಗಕ್ಕೆ ಸೇರಿದ ನೋಂದಾಯಿತ ಸಂಘ ಮತ್ತು ವಿಕಲಚೇತನರಿಗೆ ಮಾತ್ರ ಬ್ಲಾಕ್‌ಗಳನ್ನು ಅಧಿಸೂಚಿಸಿ ನಿಯಮಾನುಸಾರ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಕ್ರಮ ವಹಿಸುವುದು.

(vii) ಕಂದಾಯ ಮತ್ತು ಅರಣ್ಯ ಇಲಾಖೆಯ ನಿರಾಕ್ಷೇಪಣಾ ಪತ್ರಗಳು ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ತಾಂತ್ರಿಕ ವರದಿ ಸ್ವೀಕೃತವಾದ ಕಟ್ಟಡ ಕಲ್ಲಿನ ನಿಕ್ಷೇಪದ ಬ್ಲಾಕುಗಳಿಗೆ ನಿಯಮ 3-F(4) ರಲ್ಲಿ ನಿಗದಿಪಡಿಸಿರುವಂತೆ ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯಿಂದ ಲಾಟರಿ ಮೂಲಕ ನಿಯಮಾನುಸಾರ ಮೀಸಲಾತಿ ನಿಗದಿಪಡಿಸಿ (ನೋಂದಾಯಿತ ಸಂಘ / ಸಂಸ್ಥೆ ಮತ್ತು ವಿಕಲಚೇತನರಿಗೆ ಸಂಬಂಧಿಸಿದ ಬ್ಲಾಕುಗಳು) ಅಧಿಸೂಚನೆ ಜಾರಿ ಮಾಡುವುದು.

(viii) ಈ ರೀತಿ ಹೊರಡಿಸಲಾಗುವ ಅಧಿಸೂಚನೆಗಳನ್ನು ಕಲ್ಲುಗಣಿ ಗುತ್ತಿಗೆ ಅರ್ಜಿಗಳನ್ನು ಸ್ವೀಕರಿಸುವ ಅಂತಿಮ ದಿನಾಂಕಕ್ಕೆ ಕನಿಷ್ಟ 30 ದಿನಗಳ ಮುಂಚಿತವಾಗಿ ಪ್ರಕಟಿಸತಕ್ಕದು.

(ix) ಅಧಿಸೂಚಿಸಿದ ಕಟ್ಟಡ ಕಲ್ಲು ನಿಕ್ಷೇಪದ ಬ್ಲಾಕುಗಳ ಗ್ರಾಮ, ಸರ್ವೆ ನಂಬರ್, ವಿಸ್ತೀರ್ಣ, ಮೀಸಲಾತಿ ಹಾಗೂ ಜಿಪಿಎಸ್ /ಡಿ.ಜಿ.ಪಿ.ಎಸ್ ಕೋ-ಆರ್ಡಿನೇಟ್ಸ್‌ಗಳನ್ನು ಒಳಗೊಂಡ ಮಾಹಿತಿಯನ್ನು ರಾಜ್ಯ ಮತ್ತು ಸ್ಥಳೀಯವಾಗಿ ವ್ಯಾಪಕ ಪ್ರಸಾರವುಳ್ಳ ಎರಡು ದಿನಪತ್ರಿಕೆಗಳಲ್ಲಿ (ಕನಿಷ್ಠ ಒಂದು ಕನ್ನಡ ದಿನಪತ್ರಿಕೆ) ಜಾಹೀರಾತು ಪ್ರಕಟಿಸಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗಾಗಿ ಅರ್ಜಿಗಳನ್ನು ಸಕ್ಷಮ ಪ್ರಾಧಿಕಾರವು ಆಹ್ವಾನಿಸುವುದು.

(x) ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯಿಂದ ನಿಯಮ 3 F(4) ರಂತೆ, ಮೀಸಲಾತಿ ನಿಗದಿಪಡಿಸಿದ ಅಧಿಸೂಚಿತ ಬ್ಲಾಕ್ ಗಳಿಗೆ ಅರ್ಜಿ ಸಲ್ಲಿಸುವ ಅನುಸೂಚಿತ ಜಾತಿ / ಅನುಸೂಚಿತ ಪಂಗಡ, ವಂಶ ಪಾರಂಪರಿಕವಾಗಿ ಕಟ್ಟಡ ಕಲ್ಲು ಗಣಿಗಾರಿಕೆಯನ್ನೇ ಅವಲಂಬಿಸಿ ಜೀವನ ಸಾಗಿಸುತ್ತಿರುವ ವ್ಯಕ್ತಿಗಳು / ನೋಂದಾಯಿತ ಸಂಘಗಳ ಎಲ್ಲಾ ಸದಸ್ಯರುಗಳು, ವಿಕಲಚೇತನರು ಮತ್ತು ಪಾರಂಪರಿಕವಾಗಿ ಕಟ್ಟಡ ಕಲ್ಲು ಗಣಿಗಾರಿಕೆ ನಿರ್ವಹಿಸುತ್ತಿರುವ ಹಾಗೂ ಆರ್ಥಿಕ ದುರ್ಬಲ ವರ್ಗದವರು ಅಧಿಸೂಚಿತ ಪ್ರದೇಶದ ತಾಲ್ಲೂಕಿನ ವಾಸಿಗಳಾಗಿರತಕ್ಕದ್ದು.

(xi) ಅನುಸೂಚಿತ ಜಾತಿ / ಅನುಸೂಚಿತ ಪಂಗಡ, ಪಾರಂಪರಿಕವಾಗಿ ಕಲ್ಲು ಗಣಿಗಾರಿಕೆಯನ್ನೇ ಅವಲಂಬಿಸಿ ಜೀವನ ಸಾಗಿಸುತ್ತಿರುವ ವ್ಯಕ್ತಿಗಳು / ನೋಂದಾಯಿತ ಸಂಘದ ಸದಸ್ಯರುಗಳು, ಆರ್ಥಿಕವಾಗಿ ಹಿಂದುಳಿದ ವರ್ಗದ ವ್ಯಕ್ತಿಗಳು ವಿಕಲಚೇತನರಿಗೆ ಮತ್ತು ಪಾರಂಪರಿಕವಾಗಿ ಕಲ್ಲು ಗಣಿಗಾರಿಕೆ ನಿರ್ವಹಿಸುತ್ತಿರುವ ಹಾಗೂ ಆರ್ಥಿಕ ದುರ್ಬಲ ವರ್ಗದವರು ರಾಜ್ಯದ ಯಾವುದೇ ಜಿಲ್ಲೆಯಲ್ಲಿ ಈಗಾಗಲೇ ವೈಯಕ್ತಿಕ, ಸಂಘ/ಸಂಸ್ಥೆಗಳು, ಪಾಲುದಾರಿಕೆಯ ಹೆಸರಿನಲ್ಲಿ ಚಾಲ್ತಿಯಲ್ಲಿರುವ ಉಪ ಖನಿಜ ಗಣಿ ಗುತ್ತಿಗೆ ಹೊಂದಿದ್ದಲ್ಲಿ, ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 3-F(7)ರಡಿ ಕಲ್ಲುಗಣಿ ಗುತ್ತಿಗೆ ಕೋರಿ ಅರ್ಜಿ ಸಲ್ಲಿಸಲು ಅರ್ಹನಾಗಿರತಕ್ಕದ್ದಲ್ಲ.

(xii) ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 8(4) ರಂತೆ ಅನಧಿಕೃತ ಕಲ್ಲುಗಣಿ ಚಟುವಟಿಕೆ ನಡೆಸಿ ದಂಡನೀಯ ಶಿಕ್ಷೆಗೆ ಒಳಪಟ್ಟಿದ್ದಲ್ಲಿ, ನಿಯಮ 3-F ರಡಿ ಕಲ್ಲುಗಣಿ ಗುತ್ತಿಗೆ ಕೋರಿ ಅರ್ಜಿ ಸಲ್ಲಿಸಲು ಅರ್ಹನಾಗಿರತಕ್ಕದ್ದಲ್ಲ.

(xiii) ಅರ್ಜಿದಾರನು ಅಥವಾ ನೋಂದಾಯಿತ ಸಂಘದ ಸದಸ್ಯರುಗಳ ವಾಸಸ್ಥಳದ ಬಗ್ಗೆ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್ ರವರಿಂದ ವಾಸ ಸ್ಥಳ ದೃಢೀಕರಣ ಪತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಕಲ್ಲುಗಣಿಗಾರಿಕೆಯನ್ನೇ ಅವಲಂಬಿಸಿ ಜೀವನ ನಡೆಸುತ್ತಿರುವ ಬಗ್ಗೆ ಪ್ರಮಾಣ ಪತ್ರ ಮತ್ತು ವಿಕಲಚೇತನ ವರ್ಗದ ಸಕ್ಷಮ ಪ್ರಾಧಿಕಾರದಿಂದ ನಿಗದಿಪಡಿಸಿರುವ ಮೀಸಲಾತಿ ಅಡಿ ಹೊಂದಿರುವ ಅರ್ಹತೆ ಕುರಿತಂತೆ ವೈದ್ಯಕೀಯ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸುವುದು.

(xiv) ನಿಯಮ 3-F(4) ರಲ್ಲಿ ನಿಗದಿಪಡಿಸಿರುವ ಮೀಸಲಾತಿ ಅನ್ವಯ 3-F(4) (i) ಮತ್ತು (ii) ರ ವರ್ಗದಿಂದ ಒಂದೇ ಕಟ್ಟಡ ಕಲ್ಲುಗಣಿ ನಿಕ್ಷೇಪದ ಬ್ಲಾಕಿಗೆ ಸಂಬಂಧಿಸಿದಂತೆ ಒಂದಕ್ಕಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತಗೊಂಡಿದ್ದಲ್ಲಿ, ನಿಯಮ 3-F(5) ರಲ್ಲಿ ನಿರ್ದಿಷ್ಟಪಡಿಸಿರುವ ಆಧ್ಯತೆಯನುಸಾರ ಅರ್ಜಿಗಳನ್ನು ಪರಿಗಣಿಸುವುದು.

(xv) ಮೇಲಿನಂತೆ ಆಧ್ಯತೆಯನ್ನು ಪರಿಗಣಿಸಿದ ನಂತರವೂ ಒಂದಕ್ಕಿಂತ ಹೆಚ್ಚಿನ ಅರ್ಜಿಗಳು ಇದ್ದಲ್ಲಿ, ಅಂತಹ ಅರ್ಜಿಗಳನ್ನು ಲಾಟರಿ ಮೂಲಕ ಪರಿಗಣಿಸಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಯು ಕ್ರಮ ವಹಿಸುವುದು.

(xvi) ನಿಯಮ 3-F(4) (iii) ರಲ್ಲಿ ವಿಕಲಚೇತನ ವರ್ಗದ ಹಾಗೂ (iv) ರಲ್ಲಿ ಪಾರಂಪರಿಕವಾಗಿ ಕಲ್ಲು ಗಣಿಗಾರಿಕೆ ನಿರ್ವಹಿಸುತ್ತಿರುವ ಹಾಗೂ ಆರ್ಥಿಕ ದುರ್ಬಲ ವರ್ಗದವರಿಗೆ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಸಂಬಂಧ ಮೀಸಲಿರಿಸಿ ಅಧಿಸೂಚಿಸಿರುವ ಬ್ಲಾಕ್‌ಗಳನ್ನು ಮೇಲೆ ತಿಳಿಸಿರುವಂತೆಯೇ ಕಟ್ಟಡ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಕ್ರಮ ವಹಿಸುವುದು.

(xvii) ಮಂಜೂರಾತಿ ಪೂರ್ವದಲ್ಲಿ ಅಧಿಸೂಚಿಸಿದ ಪ್ರದೇಶದ ವಿಸ್ತೀರ್ಣಕ್ಕೆ ಅನುಗುಣವಾಗಿ ಪ್ರತಿ ಎಕರೆಗೆ ಮೋಜಣಿ ಶುಲ್ಕ ₹2,000/- ಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಪಾವತಿಸಿದ ನಂತರ ಗಣಿ ಮತ್ತು ಭೂವಿಜ್ಞಾನ ಇಲಾಖೆ ಮತ್ತು ಭೂದಾಖಲೆಗಳ ಇಲಾಖೆಯ ಸಕ್ಷಮ ಅಧಿಕಾರಿಗಳು ಜಂಟಿ ಮೋಜಣಿ ಕೈಗೊಂಡು DGPS ಉಪಕರಣದ ಮೂಲಕ ಗಡಿ ಬಾಂದುಗಳ ಅಕ್ಷಾಂಶ-ರೇಖಾಂಶ ಗಳನ್ನು ದಾಖಲಿಸಿ ಗಡಿ ಗುರುತುಗಳನ್ನು ಸ್ಥಾಪಿಸಿ, ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿದ ಜಂಟಿ ಮೋಜಣಿ ವರದಿ ಮತ್ತು DGPS ನಿರ್ದೇಶಾಂಕಗಳನ್ನು ಒಳಗೊಂಡ ನಕಾಶೆಯನ್ನು ಪಡೆಯುವುದು ಹಾಗೂ ಸರ್ವೇ ಕಾರ್ಯಕ್ಕೆ ತಗಲುವ ವೆಚ್ಚವನ್ನು ಮಂಜೂರಾತಿದಾರರು ಭರಿಸತಕ್ಕದ್ದು.

(xviii) ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರಂತೆ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿ ರವರು ಅರ್ಜಿತ ಪ್ರದೇಶದಲ್ಲಿ ಕಲ್ಲುಗಣಿ ಮಂಜೂರಾತಿಯನ್ನು ನಮೂನೆ-GL ನಲ್ಲಿ ಅಧಿಸೂಚನೆ ಜಾರಿ ಮಾಡುವುದು.

(xix) ಮಂಜೂರಾತಿದಾರರು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 8 (1-A) ರಂತೆ ಅನುಮೋದಿತ ಕ್ವಾರಿ ಯೋಜನೆ ಮತ್ತು ಸಂಬಂಧಪಟ್ಟ ಪ್ರಾಧಿಕಾರ (SEIAA / MoEF) ದಿಂದ ಪರಿಸರ ಅನುಮತಿ ಪತ್ರ ಪಡೆಯುವುದು.

(xx) ಮಂಜೂರಾತಿದಾರರಿಗೆ ಅನ್ವಯಿಸುವ ಮುಂಗಡ ರಾಜಧನ, ಪರಿಸರ ಸಂರಕ್ಷಣಾ ಶುಲ್ಕ ಹಾಗೂ ಇನ್ನಿತರೆ ಅನ್ವಯಿಕ ಶುಲ್ಕಗಳನ್ನು ಪಾವತಿಸಿಕೊಂಡ ನಂತರ, ಸಂಬಂದಿಸಿದ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿರವರು ನಮೂನೆ-E ರಲ್ಲಿ ಕಲ್ಲುಗಣಿ ಗುತ್ತಿಗೆ ಕರಾರು ಅಮಲ್ಜಾರಿ ಮಾಡುವುದು.

(xxi) ಗುತ್ತಿಗೆದಾರರು, ಕರಾರು ದಸ್ತಾವೇಜನ್ನು ಸಂಬಂಧಪಟ್ಟ ಉಪ ನೊಂದಣಾಧಿಕಾರಿ ಕಛೇರಿಯಲ್ಲಿ ಕರಾರು ಅಮಲ್ಜಾರಿಯಾದ ದಿನಾಂಕದಿಂದ 90 ದಿನಗಳೊಳಗಾಗಿ ನೋಂದಾಯಿಸುವುದು.

(xxii) ನಿಯಮ 3-F(4) ರಂತೆ ಕಲ್ಲುಗಣಿ ಗುತ್ತಿಗೆ ಪಡೆಯುವವರಿಗೆ ಹೆಚ್ಚುವರಿ ಮೊತ್ತ (Additional Payment) ಮತ್ತು ನಿಯಮ 36(5) ರಂತೆ Upfront Payment ಪಾವತಿಗೆ ವಿನಾಯಿತಿ ನೀಡುವುದು ಮತ್ತು ರಾಜಧನದ ಶೇಕಡ 30 ರಷ್ಟು ಮೊತ್ತವನ್ನು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ವಂತಿಕೆಯನ್ನಾಗಿ ಸಂಗ್ರಹಿಸುವುದು.

(xxiii) ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023ರ ನಿಯಮ 3-F ರಂತೆ ಅನುಸೂಚಿತ ಜಾತಿ / ಅನುಸೂಚಿತ ಪಂಗಡ, ಪಾರಂಪರಿಕವಾಗಿ ಕಲ್ಲು ಗಣಿಗಾರಿಕೆಯನ್ನೇ ಅವಲಂಬಿಸಿ ಜೀವನ ಸಾಗಿಸುತ್ತಿರುವ ವ್ಯಕ್ತಿಗಳ ವೈಯಕ್ತಿಕ ಅರ್ಜಿಗಳಿಗೆ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಸಂಬಂಧ ಪ್ರತ್ಯೇಕವಾಗಿ ಮಾರ್ಗಸೂಚಿಗಳನ್ನು ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(**ಶಿವಪ್ರಕಾಶ**)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಗಣಿ).

**PR-366**

## **ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 8-R(4) ರಂತೆ ಕ್ಲಸ್ಟರ್ ಪ್ರದೇಶದ ಕಲ್ಲು ಗಣಿ ಗುತ್ತಿಗೆಗಳಿಗೆ ಹೊಂದಿಕೊಂಡಂತಿರುವ ಪ್ರದೇಶದ ಮಧ್ಯ ಭಾಗದಲ್ಲಿ ಉಪಖನಿಜ ನಿಕ್ಷೇಪವುಳ್ಳ ಮುಕ್ತವಾದ (free area) ಸರ್ಕಾರಿ ಜಮೀನನ್ನು ಸದರಿ ಕ್ಲಸ್ಟರ್ ಪ್ರದೇಶದೊಳಗೆ ಬರುವ ಗುತ್ತಿಗೆದಾರರಿಗೆ ಹರಾಜು ರಹಿತವಾಗಿ ಮಂಜೂರು ಮಾಡುವ ಕುರಿತು ಮಾರ್ಗಸೂಚಿಗಳು.

**ಓದಲಾಗಿದೆ:**

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ-ಎಂಎಂಎನ್/205/ 2023, ದಿನಾಂಕ 17.03.2023.
2. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಪತ್ರಗಳ ಸಂಖ್ಯೆ
   a. ಗಭೂಇ/ಉನಿ(ಖ.ಆ)/ಕಗಗು/ತಿ.ನಿ.-01/2023-24/1105, ದಿನಾಂಕ 13.06.2023.
   b. ಗಭೂಇ/ಉನಿ(ಖ.ಆ)/ಕಗಗು/ತಿ.ನಿ.-01/2023-24/4670, ದಿನಾಂಕ 04.09.2023.

*******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಅಧಿಸೂಚನೆಯಲ್ಲಿ, ರಾಜ್ಯ ಸರ್ಕಾರವು, ದಿನಾಂಕ 17.03.2023 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ನ್ನು ಜಾರಿಗೆ ತಂದಿರುತ್ತದೆ. ಸದರಿ ತಿದ್ದುಪಡಿ ನಿಯಮಗಳು, 2023ರ ನಿಯಮ 8-R(4) ರಂತೆ ಕ್ಲಸ್ಟರ್ ಪ್ರದೇಶದಲ್ಲಿನ ಕಲ್ಲುಗಣಿ ಗುತ್ತಿಗೆಗಳ ಮಧ್ಯಭಾಗದಲ್ಲಿ ನಿಯಮ 15-A ರ ಷೆಡ್ಯೂಲ್ II-A ರಲ್ಲಿ ನಿಗದಿಪಡಿಸಿರುವ ವಿಸ್ತೀರ್ಣಕ್ಕಿಂತ ಕಡಿಮೆ ಪ್ರದೇಶವು ಉಪಖನಿಜ ನಿಕ್ಷೇಪ ಹೊಂದಿದ್ದಲ್ಲಿ,

ಅಂತಹ ಮುಕ್ತವಾದ ಪ್ರದೇಶವನ್ನು ಗುತ್ತಿಗೆದಾರರಿಗೆ ಹರಾಜು ರಹಿತವಾಗಿ ಹಂಚಿಕೆ ಮಾಡುವ ಕುರಿತು ಸರ್ಕಾರದಿಂದ ಮಾರ್ಗಸೂಚಿಗಳನ್ನು ಹೊರಡಿಸ ಬೇಕಾಗಿರುತ್ತದೆ.

1. ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರಗಳಲ್ಲಿ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 8-R(4) ನ್ನು ಅನುಷ್ಠಾನಗೊಳಿಸುವಲ್ಲಿ ಅನುಸರಿಸುವ ಕ್ರಮಗಳ ಬಗ್ಗೆ ಕರಡು ಮಾರ್ಗಸೂಚಿಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.
2. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 8-R(4) ರನ್ವಯ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಐ-ಎಂಎಂಎನ್/106/2023, ಬೆಂಗಳೂರು, ದಿನಾಂಕ:11.09.2023.**

3. ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 8-R(4) ರಂತೆ ಕ್ಲಸ್ಟರ್ ಪ್ರದೇಶದ ಕಲ್ಲು ಗಣಿ ಗುತ್ತಿಗೆಗಳಿಗೆ ಹೊಂದಿಕೊಂಡಂತಿರುವ (Compact and Contiguous) ಪ್ರದೇಶದ ಮಧ್ಯ - ಭಾಗದಲ್ಲಿ ಉಪಖನಿಜ ನಿಕ್ಷೇಪವುಳ್ಳ ಮುಕ್ತವಾದ (free area) ಸರ್ಕಾರಿ ಜಮೀನನ್ನು ಸದರಿ ಕ್ಲಸ್ಟರ್ ಪ್ರದೇಶದೊಳಗೆ ಬರುವ ಗುತ್ತಿಗೆದಾರರಿಗೆ ಹರಾಜು ರಹಿತವಾಗಿ ಮಂಜೂರು ಮಾಡುವ ಕುರಿತು ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

**ಮಾರ್ಗಸೂಚಿಗಳು:**

A. ಮಾನದಂಡಗಳು :-

(i) ಈ ನಿಯಮದಡಿ ಹಂಚಿಕೆ ಮಾಡಲು ಉದ್ದೇಶಿದಿರುವ ಕಲ್ಲುಗಣಿ ಗುತ್ತಿಗೆಗಳ ಮಧ್ಯಭಾಗದ ಮುಕ್ತ ಪ್ರದೇಶವು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು-2023ರ ನಿಯಮ 15-A ರ ಷೆಡ್ಯೂಲ್ II-A ರಲ್ಲಿ ನಿಗದಿಪಡಿಸಿರುವ ಕನಿಷ್ಟ ವಿಸ್ತೀರ್ಣಕ್ಕಿಂತ ಕಡಿಮೆ ಪ್ರದೇಶವಾಗಿರಬೇಕು.

(ii) ನಿಯಮ 2(1)(a-4) ರಂತೆ ಕ್ಲಸ್ಟರ್ ನ್ನು ಘೋಷಿಸಿದ ನಂತರ ಒಂದಕ್ಕಿಂತ ಹೆಚ್ಚಿನ ಕಲ್ಲುಗಣಿ ಗುತ್ತಿಗೆದಾರರು ನಿಯಮ 2(1)(a-5) ರಂತೆ ಸಂಘವನ್ನು ರಚಿಸಿ, ಪರಿಸರ ನಿರ್ವಹಣಾ ಯೋಜನೆಯಡಿ ಗಣಿ ಕಾರ್ಯ ನಿರ್ವಸುತ್ತಿರಬೇಕು.

(iii) ಕ್ಲಸ್ಟರ್ ಕಲ್ಲುಗಣಿ ಗುತ್ತಿಗೆ ಪ್ರದೇಶಗಳ ಮಧ್ಯಭಾಗದಲ್ಲಿ ಮುಕ್ತವಿರುವ ಖನಿಜ ನಿಕ್ಷೇಪದ ಪ್ರದೇಶವು ಪ್ರಸ್ತುತ ಚಾಲ್ತಿಯಲ್ಲಿರುವ ಗುತ್ತಿಗೆಗಳಿಗೆ ಹೊಂದಿಕೊಂಡಂತೆ (Compact and Contiguous) ಇರತಕ್ಕದ್ದು.

(iv) ಪರಿಸರ ನಿರ್ವಹಣಾ ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿರುವ ಕಲ್ಲುಗಣಿ ಗುತ್ತಿಗೆದಾರರು ನಿಯಮ 19-B(4) ರಂತೆ ಸದರಿ ಕ್ಲಸ್ಟರ್ ಪ್ರದೇಶದ ಕಲ್ಲುಗಣಿ ಗುತ್ತಿಗೆಗಳನ್ನು ಸಂಯೋಜಿಸಿರತಕ್ಕದ್ದು / ಸಂಯೋಜಿಸತಕ್ಕದ್ದು.

B. ಅರ್ಜಿಯೊಂದಿಗೆ ಈ ಕೆಳಕಂಡ ದಾಖಲೆಗಳನ್ನು ಪಡೆಯುವುದು:-

a. ಖನಿಜದ ಅಭಿವೃದ್ಧಿ ಮತ್ತು ವೈಜ್ಞಾನಿಕ ಗಣಿಗಾರಿಕೆಯನ್ನು ಪ್ರೋತ್ಸಾಹಿಸುವ ಹಿನ್ನೆಲೆಯಲ್ಲಿ ಕಲ್ಲುಗಣಿ ಗುತ್ತಿಗೆ ಪ್ರದೇಶಗಳ ಕ್ಲಸ್ಟರ್ ಮಧ್ಯಭಾಗದಲ್ಲಿ ಷೆಡ್ಯೂಲ್ II-A ರ ವಿಸ್ತೀರ್ಣಕ್ಕಿಂತ ಕಡಿಮೆ ಉಪಖನಿಜ ನಿಕ್ಷೇಪವುಳ್ಳ ಪ್ರದೇಶವನ್ನು ಹರಾಜು ರಹಿತವಾಗಿ ಹಂಚಿಕೆ ಮಾಡಲು ಎರಡು ಅಥವಾ ಹೆಚ್ಚಿನ ಗುತ್ತಿಗೆ ಪ್ರದೇಶದ ಮಧ್ಯಭಾಗದ ಮುಕ್ತ ಪ್ರದೇಶಕ್ಕೆ ಹೊಂದಿಕೊಂಡಿರುವ ಗುತ್ತಿಗೆದಾರರುಗಳು ವಿಸ್ತೀರ್ಣವನ್ನೊಳಗೊಂಡಂತೆ ಪರಸ್ಪರ ಒಡಂಬಡಿಕೆ ಮೇರೆಗೆ ನಮೂನೆ AQL ನಲ್ಲಿ ಅರ್ಜಿ ಸಲ್ಲಿಸತಕ್ಕದ್ದು.

b. ಪ್ರಸ್ತುತ ಚಾಲ್ತಿಯಲ್ಲಿರುವ ಕಲ್ಲುಗಣಿ ಗುತ್ತಿಗೆದಾರರು ಗುತ್ತಿಗೆ ಮಂಜೂರಾದ ಪ್ರದೇಶಗಳನ್ನು ಒಳಗೊಂಡಂತೆ ಮುಕ್ತವಾಗಿರುವ ಪ್ರದೇಶದ DGPS ನಿರ್ದೇಶಾಂಕಗಳನ್ನೊಳಗೊಂಡ ಸ್ವಯಂ ದೃಢೀಕೃತ ಸಂಯುಕ್ತ ನಕ್ಷೆಯನ್ನು ಸಲ್ಲಿಸತಕ್ಕದ್ದು.

c. ಅರ್ಜಿತ ಪ್ರದೇಶದ ಪಹಣಿ ಪತ್ರಿಕೆ (RTC), ಗ್ರಾಮ ನಕಾಶೆ.

d. ಕಲ್ಲು ಗಣಿಗಾರಿಕೆ ಮಂಜೂರಾತಿ ಕೋರಿರುವ ಮುಕ್ತ ಪ್ರದೇಶದ ಸರ್ವೆ ಸ್ಕೆಚ್ ಅನ್ನು 1"=660" ಸ್ಕೇಲ್ ನಲ್ಲಿ DGPS ನಿರ್ದೇಶಾಂಕಗಳನ್ನು ನಮೂದಿಸಿದ 10 ಪ್ರತಿಗಳ ನೀಲಿ ನಕಾಶೆಗಳು.

e. ವಾಸಸ್ಥಳ ದೃಢೀಕರಣಕ್ಕಾಗಿ ಚುನಾವಣಾ ಗುರುತಿನ ಚೀಟಿ, ಆಧಾರ್ ಕಾರ್ಡ್ , ಇತ್ಯಾದಿ ದಾಖಲೆಗಳ ಪ್ರತಿ.

f. ಕ್ಲಸ್ಟರ್ ಘೋಷಣೆ ಪ್ರಮಾಣ ಪತ್ರ, ಕ್ಲಸ್ಟರ್ ನೋಂದಣಿ ಪ್ರಮಾಣ ಪತ್ರ, ಕ್ಲಷ್ಟರ್ ನಕಾಶೆ, ಕ್ಲಸ್ಟರ್ ನಕಾಶೆಯಲ್ಲಿ ಕಲ್ಲುಗಣಿಗಾರಿಕೆ ಮಂಜೂರಾತಿ ಕೋರಿರುವ ಮುಕ್ತ ಪ್ರದೇಶವನ್ನು ಗುರುತಿಸಿ ಸ್ವಯಂ ದೃಢೀಕರಿಸಿ ಸಲ್ಲಿಸುವುದು.

g. ಗುತ್ತಿಗೆದಾರನು ಕಂಪನಿ/ಉದ್ದಿಮೆ/ಸಂಸ್ಥೆ ಆಗಿದ್ದಲ್ಲಿ Indian Companies Act, 1956 ರಡಿ ಅಥವಾ ಇತರೆ ಯಾವುದೇ ಕಾಯ್ದೆಯಡಿ ಸಂಬಂಧಪಟ್ಟ ಪ್ರಾಧಿಕಾರ ದಿಂದ ಪಡೆದ ನೋಂದಣಿ ಪ್ರಮಾಣ ಪತ್ರ, ಪಾಲುದಾರಿಕೆ ಕರಾರು ಪತ್ರ (Registered Partnership Deed/Memorandum of Article) ಸಲ್ಲಿಸುವುದು.

h. ಕ್ಲಷ್ಟರ್ ಸಂಘದ ಪ್ರತಿ ಗುತ್ತಿಗೆದಾರರನು ವೈಯಕ್ತಿಕ/ಪಾಲುದಾರಿಕೆ/ ಸಂಸ್ಥೆ/ ಕಂಪನಿ ಕುಟುಂಬದ ಸದಸ್ಯರ ಹೆಸರಿನಲ್ಲಿ ಈಗಾಗಲೇ ಗಣಿ/ಕಲ್ಲುಗಣಿ ಗುತ್ತಿಗೆ/ಲೈಸೆನ್ಸ್ ಹೊಂದಿದ್ದಲ್ಲಿ, ಗುತ್ತಿಗೆ/ಲೈಸೆನ್ಸ್ ಗಳ ವಿವರಗಳು ಮತ್ತು ಬೇಬಾಕಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಉಪ ನಿರ್ದೇಶಕರು/ಹಿರಿಯ ಭೂವಿಜ್ಞಾನಿ ರವರಿಂದ ಪಡೆದು ಸಲ್ಲಿಸುವುದು.

i. ಅರ್ಜಿದಾರರ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ 06 ಭಾವಚಿತ್ರಗಳು.

j. **ಅರ್ಜಿ ಶುಲ್ಕ**:- ನಿರ್ದಿಷ್ಟ ಉಪಖನಿಜಗಳ ಅರ್ಜಿಗಳಿಗೆ ₹10,000/- ಮತ್ತು ನಿರ್ದಿಷ್ಟವಲ್ಲದ ಉಪಖನಿಜಗಳ ಸಂಬಂಧ ₹5,000/- ಗಳ ಖಜಾನೆ ಚಲನ್.

k. ಭದ್ರತಾ ಠೇವಣಿ ಮೊತ್ತ ಪ್ರತಿ ಎಕರೆಗೆ ₹10,000/-.

C. ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಮಾಡಲು ಕೋರಿರುವ ಮುಕ್ತ ಪ್ರದೇಶವನ್ನು ಸಂಬಂಧಪಟ್ಟ ಭೂವಿಜ್ಞಾನಿ ಮತ್ತು ಸಹಾಯಕ/ಕಿರಿಯ ಅಭಿಯಂತರರು ಜಂಟಿಯಾಗಿ ಸ್ಥಳ ತನಿಖೆ ನಡೆಸಿ, ಅರ್ಜಿದಾರರು ಅರ್ಜಿಯೊಂದಿಗೆ ಸಲ್ಲಿಸಿರುವ DGPS ನಿರ್ದೇಶಾಂಕಗಳ ನಕ್ಷೆಯನ್ನು ಸಹಾಯಕ/ಕಿರಿಯ ಅಭಿಯಂತರರು ಪರಿಶೀಲಿಸಿದ ವರದಿ ಮತ್ತು ಭೂವಿಜ್ಞಾನಿಯವರು ನಮೂನೆ-S ನಲ್ಲಿ ತಾಂತ್ರಿಕ ವರದಿಯನ್ನು ಸಲ್ಲಿಸುವುದು.

D. ಕ್ಲಷ್ಟರ್ ಸಂಘವು ಮಂಜೂರಾತಿ ಕೋರಿರುವ ಪ್ರದೇಶಕ್ಕೆ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 8(5) ರಂತೆ ನಿರ್ದಿಷ್ಟ ಉಪಖನಿಜದ ಸಂಬಂಧ ಜಿಲ್ಲಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ರವರಿಂದ ಮತ್ತು ನಿರ್ದಿಷ್ಟವಲ್ಲದ ಉಪಖನಿಜಗಳ ಸಂಬಂಧ ಉಪ ವಿಭಾಗಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ರವರಿಂದ ಕಂದಾಯ ಮತ್ತು ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸುವುದು.

E. ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 8(5) ರಂತೆ ಕಂದಾಯ ಅಥವಾ ಅರಣ್ಯ ಇಲಾಖೆ ಅಥವಾ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಹಂಚಿಕೆಗೆ

ಕೋರಿರುವ ಪ್ರದೇಶಕ್ಕೆ ವ್ಯತಿರಿಕ್ತವಾಗಿ ವರದಿ/ಅಭಿಪ್ರಾಯಗಳು ಸ್ವೀಕೃತವಾದಲ್ಲಿ, ಅಂತಹ ಅರ್ಜಿಗಳನ್ನು ಸಕ್ಷಮ ಪ್ರಾಧಿಕಾರಿಯವರು ತಿರಸ್ಕರಿಸುವುದು.

F. ಮಂಜೂರಾತಿ ಕೋರಿರುವ ಪ್ರದೇಶಕ್ಕೆ ನಿರಾಕ್ಷೇಪಣಾ ಪತ್ರಗಳು ಸ್ವೀಕೃತವಾದ ನಂತರ ಮಂಜೂರು ಮಾಡಲು ಉದ್ದೇಶಿಸಿರುವ ಪ್ರದೇಶ ಮತ್ತು ಗುತ್ತಿಗೆ ಪ್ರದೇಶದ ಒಟ್ಟು ವಿಸ್ತೀರ್ಣಕ್ಕೆ ಪ್ರತಿ ಎಕರೆಗೆ ಮೋಜಣಿ ಶುಲ್ಕ ₹ 2,000/- ಪಡೆದು ಭೂದಾಖಲೆಗಳ ಇಲಾಖೆ ಸಹಯೋಗ ದೊಂದಿಗೆ ಜಂಟಿ ಮೋಜಣಿ ಕೈಗೊಂಡು DGPS ಉಪಕರಣದ ಮೂಲಕ ಹಂಚಿಕೆ ಪ್ರದೇಶ ಮತ್ತು ಕ್ಲಷ್ಟರ್ ಪ್ರದೇಶಗಳನ್ನು ಒಟ್ಟುಗೂಡಿಸಿ ಸದರಿ ಪ್ರದೇಶಗಳ ಗಡಿ ಬಾಂದುಗಳ ಅಕ್ಷಾಂಶ-ರೇಖಾಂಶಗಳನ್ನು ದಾಖಲಿಸಿ, ಗಡಿ ಗುರುತು ಕಲ್ಲುಗಳನ್ನು ಸ್ಥಾಪಿಸಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿದ ಜಂಟಿ ಮೋಜಣಿ ವರದಿ ಮತ್ತು DGPS ನಿರ್ದೇಶಾಂಕಗಳನ್ನು ಒಳಗೊಂಡ ಪರಿಷ್ಕೃತ ನಕಾಶೆಯನ್ನು ಉಪ ನಿರ್ದೇಶಕರು/ಹಿರಿಯ ಭೂವಿಜ್ಞಾನಿ ರವರು ಪಡೆಯುವುದು.

G. ಮೇಲೆ ತಿಳಿಸಿರುವ ಎಲ್ಲಾ ದಾಖಲೆಗಳು ಸ್ವೀಕೃತವಾದ ನಂತರ ಮುಕ್ತವಿರುವ ಪ್ರದೇಶವನ್ನು ಚಾಲ್ತಿ ಕ್ಲಷ್ಟರ್ ಗುತ್ತಿಗೆ ಪ್ರದೇಶಗಳೊಂದಿಗೆ ನಿಯಮ 19-B(4) ರಂತೆ ಸಂಯೋಜನೆಗೊಳಿಸಿ ಸಕ್ಷಮ ಅಧಿಕಾರಿಗಳು ತಿದ್ದುಪಡಿ ಅಧಿಸೂಚನೆ ಜಾರಿಗೊಳಿಸುವುದು.

H. ಮಂಜೂರಾತಿ ಪ್ರದೇಶವನ್ನು DGPS and Drone ಉಪಕರಣ ಬಳಸಿ ಸರ್ವೆ ಕಾರ್ಯ ಕೈಗೊಂಡು Detailed Surface Plan ನ್ನು ತಯಾರಿಸಿ, Reference Level/Reduced Level ಗಳನ್ನು ದಾಖಲಿಸಿ, ಪ್ರಸ್ತುತ ಭೂಮಟ್ಟವನ್ನು ಘನೀಕರಿಸಿ ದೃಢೀಕರಿಸಿದ ವರದಿಯನ್ನು ಮಂಜೂರಾತಿದಾರರಿಂದ ಪಡೆಯುವುದು.

I. ಗುತ್ತಿಗೆ ಮಂಜೂರಾತಿದಾರರು ಪರಿಷ್ಕೃತ ಕ್ವಾರಿಯಿಂಗ್ ಪ್ಲಾನ್ ಅನುಮೋದನೆಯನ್ವಯ ಪರಿಷ್ಕೃತ ಪರಿಸರ ಅನುಮತಿ ಪತ್ರ ಪಡೆದು ಸಲ್ಲಿಸತಕ್ಕದ್ದು.

J. ಗುತ್ತಿಗೆ ಮಂಜೂರಾತಿದಾರರಿಂದ ಮುಂಗಡ ರಾಜಧನ, ಪರಿಸರ ಸಂರಕ್ಷಣಾ ಶುಲ್ಕ ಹಾಗೂ ಶಾಸನ ಬದ್ಧ ಇನ್ನಿತರೆ ಶುಲ್ಕಗಳನ್ನು ಪಾವತಿಸಿಕೊಂಡು, ನಮೂನೆ-E ರಲ್ಲಿ ನಿಯಮ 19-B(4) ರಲ್ಲಿ ತಿಳಿಸಿರುವಂತೆ ಮೂಲ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ದಿನಾಂಕದಿಂದ ಅನ್ವಯವಾಗುವಂತೆ ಸಕ್ಷಮ ಪ್ರಾಧಿಕಾರಿಯು ಪೂರಕ ಗುತ್ತಿಗೆ ಕರಾರು ಅಮಲ್ಜಾರಿ ಮಾಡುವುದು. ಕರಾರು ದಸ್ತಾವೇಜನ್ನು ನಿಯಮಾನುಸಾರ ನೋಂದಾಯಿಸಿ, ಸಲ್ಲಿಸಿದ ನಂತರ ಗಣಿಗಾರಿಕೆಗೆ ಅನುಮತಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(**ಶಿವಪ್ರಕಾಶ**)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಗಣಿ).

**PR-367**

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 31-ZC ರಡಿ ಎಂ-ಸ್ಯಾಂಡ್ ಉತ್ಪಾದನೆಗಾಗಿ ಸರ್ಕಾರಿ ಜಮೀನುಗಳಲ್ಲಿ ಹರಾಜು ರಹಿತವಾಗಿ ಕಟ್ಟಡ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಬಗ್ಗೆ ಮಾರ್ಗಸೂಚಿಗಳು.

**ಓದಲಾಗಿದೆ:** 1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 418 ಎಂಎಂಎನ್ 2015 (ಭಾಗ-II), ದಿನಾಂಕ 12.08.2016.

2. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ-ಎಂಎಂಎನ್/205/ 2023, ದಿನಾಂಕ 17.03.2023.

3. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಪತ್ರಗಳ ಸಂಖ್ಯೆ

   a. ಗಭೂಇ/ಉನಿ(ಖ.ಆ)/ಕಗಗು/ತಿ.ನಿ.-01/2023-24/1105, ದಿನಾಂಕ 13.06.2023.

   b. ಗಭೂಇ/ಉನಿ(ಖ.ಆ)/ಕಗಗು/ತಿ.ನಿ.-01/2023-24/4670, ದಿನಾಂಕ 04.09.2023..

*******

ಮೇಲೆ ಓದಲಾದ ಕ್ರಮ ಸಂಖ್ಯೆ (1) ಮತ್ತು (2 )ರ ಅಧಿಸೂಚನೆಯಲ್ಲಿ, ರಾಜ್ಯ ಸರ್ಕಾರವು, ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ಗೆ ತಿದ್ದುಪಡಿಗಳನ್ನು ತಂದಿರುತ್ತದೆ. ಸದರಿ ತಿದ್ದುಪಡಿ ನಿಯಮಗಳ ನಿಯಮ 31-ZC ರಡಿ ಎಂ-ಸ್ಯಾಂಡ್ ಉತ್ಪಾದನೆಗಾಗಿ ಸರ್ಕಾರಿ ಜಮೀನುಗಳಲ್ಲಿ ಹರಾಜು ರಹಿತವಾಗಿ ಕಟ್ಟಡ ಕಲ್ಲು ಗಣಿ ಗುತ್ತಿಗೆ ಮಂಜೂರಾತಿಗೆ ಅವಕಾಶ ಕಲ್ಪಿಸಲಾಗಿದೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರಗಳಲ್ಲಿ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು, ಎಂ-ಸ್ಯಾಂಡ್ ಉತ್ಪಾದನೆಗಾಗಿ ಸರ್ಕಾರಿ ಜಮೀನುಗಳಲ್ಲಿ ಹರಾಜು ರಹಿತವಾಗಿ ಕಟ್ಟಡ ಕಲ್ಲು ಗಣಿ ಗುತ್ತಿಗೆ ಮಂಜೂರಾತಿಯನ್ನು ಅನುಷ್ಠಾನಗೊಳಿಸುವಲ್ಲಿ ಅನುಸರಿಸುವ ಕ್ರಮಗಳ ಬಗ್ಗೆ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 31-ZC ರಡಿ ಮಾರ್ಗಸೂಚಿಗಳನ್ನು ಹೊರಡಿಸಲು ಕೋರುತ್ತಾ, ಕರಡು ಮಾರ್ಗಸೂಚಿಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

3. ರಾಜ್ಯದಲ್ಲಿ ಎಂ-ಸ್ಯಾಂಡ್ ಉತ್ಪಾದಿಸುವ ಕ್ರಷರ್ ಘಟಕಗಳ ಕಾರ್ಯ ನಿರ್ವಹಣೆಗೆ ಅಗತ್ಯವಿರುವ ಕಚ್ಚಾ ವಸ್ತುಗಳ ಪೂರೈಕೆಗಾಗಿ ಅವಕಾಶ ಕಲ್ಪಿಸಲು ಹಾಗೂ ನಿರ್ಮಾಣ ಕಾಮಗಾರಿಗಳಿಗೆ ಅಗತ್ಯವಾದ ಕಟ್ಟಡ ಕಲ್ಲಿನ ಉತ್ಪನ್ನಗಳನ್ನು ಬೇಡಿಕೆ ಅನುಗುಣವಾಗಿ ಪೂರೈಸಲು ನಿಯಮಗಳನ್ನು ರೂಪಿಸಲಾಗಿರುತ್ತದೆ. ಅಂತೆಯೇ, ಮಾರುಕಟ್ಟೆಯಲ್ಲಿ ಏಕಸ್ವಾಮ್ಯತ್ವವನ್ನು ತಪ್ಪಿಸಲು, ಎಲ್ಲರಿಗೂ ಸಮಾನ ಅವಕಾಶ ನೀಡಲು ಮಾರ್ಗಸೂಚಿಗಳನ್ನು ಹೊರಡಿಸುವ ಅವ್ಯಕತೆ ಇರುತ್ತದೆ. ಅದರಂತೆ, ಕರ್ನಾಟಕ ಉಪಖನಿಜ (ತಿದ್ದುಪಡಿ) ನಿಯಮಗಳು, 2016 ಮತ್ತು ತಿದ್ದುಪಡಿ ನಿಯಮಗಳು, 2023 ರಡಿ ನಿಯಮಾನುಸಾರ ಎಂ-ಸ್ಯಾಂಡ್ ಉತ್ಪಾದನೆಗಾಗಿ ಕಟ್ಟಡ ಕಲ್ಲು ಗಣಿ ಗುತ್ತಿಗೆ ಮಂಜೂರಾತಿ ಕೋರಿ ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ, ನಿಯಮಾನುಸಾರ ವಿಲೇವಾರಿ ಮಾಡಲು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 31-ZC ರನ್ವಯ ಸರ್ಕಾರವು, ಕೆಳಕಂಡಂತೆ ಮಾರ್ಗಸೂಚಿಗಳನ್ನು ಹೊರಡಿಸಲು ತೀರ್ಮಾನಿಸಿದೆ. ಅದರಂತೆ, ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಿಐ-ಎಂಎಂಎನ್/106/2023, ಬೆಂಗಳೂರು, ದಿನಾಂಕ:11.09.2023.**

4. ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 31-ZC ರಡಿ ಎಂ-ಸ್ಯಾಂಡ್ ಉತ್ಪಾದನೆಗಾಗಿ ಸರ್ಕಾರಿ ಜಮೀನುಗಳಲ್ಲಿ ಹರಾಜು ರಹಿತವಾಗಿ ಕಟ್ಟಡ ಕಲ್ಲು ಗಣಿ ಗುತ್ತಿಗೆ ಮಂಜೂರು ಮಾಡುವಲ್ಲಿ ಸಕ್ಷಮ ಪ್ರಾಧಿಕಾರಗಳು ಈ ಕೆಳಕಂಡ ಮಾರ್ಗಸೂಚಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅನುಸರಿಸಲು ಆದೇಶಿಸಿದೆ.

**ಮಾರ್ಗಸೂಚಿಗಳು:**

A. ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮಗಳು ಜಾರಿಯಾಗುವ ಪೂರ್ವದಲ್ಲಿ ಎಂ-ಸ್ಯಾಂಡ್ ಘಟಕ ಹೊಂದಿರುವವರು (Form-C ಮತ್ತು CFO) ಅಥವಾ ಎಂ-ಸ್ಯಾಂಡ್ ಘಟಕ ಸ್ಥಾಪಿಸಲು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ Consent for Establishment (CFE) ಪಡೆದಿರುವ ವ್ಯಕ್ತಿ / ಸಂಸ್ಥೆ / ಕಂಪನಿಯವರು ಎಂ-ಸ್ಯಾಂಡ್ ಉತ್ಪಾದನೆಗಾಗಿ ಕಟ್ಟಡ ಕಲ್ಲು ಗಣಿ ಗುತ್ತಿಗೆ ಮಂಜೂರಾತಿ ಕೋರಿ ತಿದ್ದುಪಡಿ ನಿಯಮಗಳು, 2023 ಜಾರಿಯಾದ ದಿನಾಂಕ:17.03.2023 ರಿಂದ ನಿಗದಿಪಡಿಸಿದ ಅವಧಿಯೊಳಗೆ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ರವರಿಗೆ ಈ ಕೆಳಕಂಡ ದಾಖಲಾತಿಗಳೊಂದಿಗೆ ನಮೂನೆ AQL ನಲ್ಲಿ ಅರ್ಜಿಯನ್ನು ಸಲ್ಲಿಸುವುದು.

(a) ಅರ್ಜಿ ನಮೂನೆ-AQL

(b) ಅರ್ಜಿ ಶುಲ್ಕ :- ಪ್ರತಿ ಎಕರೆಗೆ ₹ 10,000/-

(c) ಅರ್ಜಿದಾರರ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ 6-ಭಾವಚಿತ್ರಗಳು.

(d) ವಾಸಸ್ಥಳ ದೃಢೀಕರಣಕ್ಕಾಗಿ ಚುನಾವಣಾ ಗುರುತಿನ ಚೀಟಿ/ಆಧಾರ್ ಕಾರ್ಡ್, ಇತ್ಯಾದಿ ದಾಖಲೆಗಳ ಪ್ರತಿ.

(e) ಆದಾಯ ತೆರಿಗೆ ಪಾವತಿ ವಿವರ, GST ನೋಂದಣಿ ಪ್ರಮಾಣ ಪತ್ರ.

(f) ಅರ್ಜಿತ ಪ್ರದೇಶದ ಪಹಣಿ ಪತ್ರಿಕೆ (RTC),

(g) ಕಲ್ಲು ಗಣಿಗಾರಿಕೆಗೆ ಅರ್ಜಿ ಸಲ್ಲಿಸುವ ಪ್ರದೇಶದ ಸರ್ವೆ ನಂಬರ್, ನಕ್ಷೆಯನ್ನು 1"=660" ಸ್ಕೇಲ್ ನಲ್ಲಿ DGPS ನಿರ್ದೇಶಾಂಕಗಳನ್ನು ನಮೂದಿಸಿದ ನೀಲಿ ನಕಾಶೆಗಳು.

(h) ಜಿಲ್ಲಾ ಕಲ್ಲು ಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದಿಂದ ಪಡೆದಿರುವ ಕ್ರಷರ್ ಲೈಸೆನ್ಸ್ (ನಮೂನೆ-ಸಿ) ಪಡೆದು ಎಂ-ಸ್ಯಾಂಡ್ ಉತ್ಪಾದಿಸುತ್ತಿರುವ ಅಥವಾ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ತಿದ್ದುಪಡಿ ನಿಯಮಗಳು, 2023 ಜಾರಿಯಾಗುವ ಪೂರ್ವದಲ್ಲಿ ಎಂ-ಸ್ಯಾಂಡ್ ಉತ್ಪಾದನೆಗಾಗಿ ಪಡೆದಿರುವ Consent for Operation (CFO) ಅಥವಾ Consent for Establishment (CFE).

(i) ಅರ್ಜಿದಾರರು ಕಂಪನಿ / ಉದ್ದಿಮೆ / ಸಂಸ್ಥೆ ಆಗಿದ್ದಲ್ಲಿ Indian Companies Act, 1956 ರಡಿ ಅಥವಾ ಇತರೆ ಯಾವುದೇ ಕಾಯ್ದೆಯಡಿ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ನೋಂದಣಿ ಪ್ರಮಾಣ ಪತ್ರ, ಪಾಲುದಾರಿಕೆ ಕರಾರು ಪತ್ರ (Registered Partnership Deed / Memorandum of Article).

(j) ಕಲ್ಲು ಗಣಿ ಗುತ್ತಿಗೆ ಕೋರಿ ಸಲ್ಲಿಸಿರುವ ವೈಯಕ್ತಿಕ / ಸಂಸ್ಥೆ / ಪಾಲುದಾರಿಕೆ / ಕಂಪನಿಯ ಹೆಸರಿನಲ್ಲಿ ಸಲ್ಲಿಸಿರುವ ಅರ್ಜಿಗಳ ವಿವರಗಳನ್ನು ಹಾಗೂ ಈಗಾಗಲೇ

ಹೊಂದಿರುವ ಕಲ್ಲು ಗಣಿ ಗುತ್ತಿಗೆಗಳ ವಿವರಗಳನ್ನು ಒಳಗೊಂಡ--ಮಾಹಿತಿಯನ್ನು ನೋಟರಿ ಮಾಡಿಸಲಾದ ಅಫಿಡವಿಟ್ ಅನ್ನು ಸಲ್ಲಿಸುವುದು.

(k) ಅರ್ಜಿದಾರರು ವೈಯಕ್ತಿಕ / ಪಾಲುದಾರಿಕೆ / ಸಂಸ್ಥೆ / ಕಂಪನಿ ಕುಟುಂಬದ ಸದಸ್ಯರ ಹೆಸರಿನಲ್ಲಿ ಈಗಾಗಲೇ ಉಪ ಖನಿಜ ಗಣಿ ಗುತ್ತಿಗೆ / ಲೈಸೆನ್ಸ್ ಹೊಂದಿದ್ದಲ್ಲಿ, ಸದರಿ ಉಪ ಖನಿಜ ಗಣಿ ಗುತ್ತಿಗೆ / ಲೈಸೆನ್ಸ್ ಗಳ ವಿವರಗಳು ಮತ್ತು ಬೇಬಾಕಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿ ರವರಿಂದ ಪಡೆದು ಸಲ್ಲಿಸುವುದು.

(l) ಈಗಾಗಲೇ ಚಾಲ್ತಿಯಲ್ಲಿರುವ ಎಂ-ಸ್ಯಾಂಡ್ ಘಟಕ (ಕ್ರಷರ್ ಲೈಸೆನ್ಸ್ ನಮೂನೆ-ಸಿ) ಅಥವಾ ದಿನಾಂಕ 17.03.2023 ರ ಪೂರ್ವದಲ್ಲಿ ಕ್ರಷರ್ ಘಟಕ ಸ್ಥಾಪಿಸಲು ಪಡೆದಿರುವ Consent for Establishment (CFE) ಪ್ರದೇಶದ ಗಡಿಯಿಂದ ಅರ್ಜಿದಾರನು ಕಲ್ಲು ಗಣಿ ಗುತ್ತಿಗೆ ಮಂಜೂರಾತಿ ಕೋರಿರುವ ಪ್ರದೇಶವು 30 ಕಿಲೋ ಮೀಟರ್ ವ್ಯಾಪ್ತಿಯೊಳಗೆ ಇರತಕ್ಕದ್ದು (Aerial Distance). ಇದನ್ನು Google ನಕ್ಷೆಯಲ್ಲಿ ಗುರುತಿಸಿ ಅರ್ಜಿದಾರನು ಸ್ವಯಂ ದೃಢೀಕರಿಸಿ ಸಲ್ಲಿಸುವುದು.

(m) ಕಲ್ಲು ಗಣಿ ಗುತ್ತಿಗೆ ಕೋರಿರುವ ಪ್ರದೇಶವು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು,1994 ರ ಷೆಡ್ಯೂಲ್ II-A ರಲ್ಲಿ ನಿಗದಿಪಡಿಸಿರುವಂತೆ ಕನಿಷ್ಟ 02-00 ಎಕರೆ ಅಥವಾ ಹೆಚ್ಚಿನ ವಿಸ್ತೀರ್ಣವನ್ನು ಹೊಂದಿರತಕ್ಕದ್ದು.

(n) ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 15(3) ರಲ್ಲಿ ನಿರ್ದಿಷ್ಟಪಡಿಸಿದ ವಿಸ್ತೀರ್ಣಕ್ಕಿಂತ ಹೆಚ್ಚಿನ ಪ್ರದೇಶವನ್ನು ಹೊಂದತಕ್ಕದ್ದಲ್ಲ.

B. ಅರ್ಜಿಯು ಸ್ವೀಕೃತಗೊಂಡಿರುವ ಬಗ್ಗೆ ಸಂಬಂಧಪಟ್ಟ ಅರ್ಜಿದಾರರಿಗೆ ನಮೂನೆ-A ನಲ್ಲಿ ನೋಂದಾಯಿತ ಅಂಚೆ ಮೂಲಕ ಸ್ವೀಕೃತಿ ನೀಡುವುದು.

C. ಈ ಕೆಳಕಂಡ ಅರ್ಜಿಗಳು ಪರಿಗಣನೆಗೆ ಅರ್ಹವಾಗಿರುವುದಿಲ್ಲ.

i. ಅರ್ಜಿದಾರ / ಸಂಸ್ಥೆ / ಕಂಪನಿ / ಪಾಲುದಾರಿಕೆ ಸಂಸ್ಥೆಯ ಹೆಸರಿನಲ್ಲಿ ಈಗಾಗಲೇ ಗರಿಷ್ಠ 50-00 ಎಕರೆ ವಿಸ್ತೀರ್ಣದಲ್ಲಿ ಕಟ್ಟಡ ಕಲ್ಲು ಗಣಿ ಗುತ್ತಿಗೆ ಹೊಂದಿರುವವರು.

ii. ಕಲ್ಲು ಗಣಿ ಗುತ್ತಿಗೆ ಕೋರಿರುವ ಅರ್ಜಿದಾರ / ಸಂಸ್ಥೆ / ಕಂಪನಿ / ಪಾಲುದಾರಿಕೆ ಸಂಸ್ಥೆಯು, ಅಕ್ರಮ ಗಣಿಗಾರಿಕೆ ಸಂಬಂಧ ಮೊಕದ್ದಮೆ / ಖಾಸಗಿ ದೂರುಗಳು ದಾಖಲಾಗಿ, ನಿಯಮ 8(4) ರಂತೆ ಮಾನ್ಯ ನ್ಯಾಯಾಲಯದಿಂದ ದಂಡನೀಯ ಶಿಕ್ಷೆಗೆ ಒಳಪಟ್ಟಿದ್ದಲ್ಲಿ.

iii. ಅರ್ಜಿ ಸಲ್ಲಿಸಿರುವ ಪ್ರದೇಶವು ಎಂ-ಸ್ಯಾಂಡ್ ಘಟಕವಿರುವ ಸ್ಥಳ / ಕ್ರಷರ್ ಸುರಕ್ಷಿತ ವಲಯದಿಂದ 30 ಕಿ.ಮೀ ವ್ಯಾಪ್ತಿಗಿಂತ ಹೆಚ್ಚಿನ ಅಂತರವಿದ್ದಲ್ಲಿ.

iv. ದಿನಾಂಕ 12.08.2016ರ ಪೂರ್ವದಲ್ಲಿ ಅಲಂಕಾರಿಕ ಶಿಲೆ ಗಣಿಗಾರಿಕೆ ಉದ್ದೇಶಕ್ಕಾಗಿ ಗುತ್ತಿಗೆ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದ ಪ್ರದೇಶ ಮತ್ತು ಅದರ ಭಾಗಶಃ ಪ್ರದೇಶದ ಮೇಲೆ ನಿಯಮ 31-ZC ರಡಿ ಸಲ್ಲಿಕೆಯಾದ ಅರ್ಜಿಗಳು.

v. ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 31-ZC ರಡಿ ಸ್ವೀಕೃತವಾದ ಅರ್ಜಿಗಳು, ಕಟ್ಟಡ ಕಲ್ಲು ಗಣಿ ಗುತ್ತಿಗೆ ಅರ್ಜಿ ಸಂಬಂಧ ದಿನಾಂಕ 12.08.2016ರ ಪೂರ್ವದಲ್ಲಿ ಸ್ವೀಕೃತವಾಗಿದ್ದ ಅರ್ಜಿಗಳ ಪ್ರದೇಶದ ಮೇಲೆ ಅಥವಾ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರ ನಿಯಮ 31-ZC ರಡಿ (ದಿನಾಂಕ 12.08.2016 ರಿಂದ 11.02.2017ರ ವರೆಗೆ) ಸ್ವೀಕೃತವಾದ ಅರ್ಜಿಗಳ ಪ್ರದೇಶಗಳ ಮೇಲೆ ಅತಿವ್ಯಾಪ್ತಿ ಯಾದ ಅರ್ಜಿಗಳು.

vi. ಗಣಿಗಾರಿಕೆ ಸಂಬಂಧ ಅರ್ಜಿದಾರ / ಸಂಸ್ಥೆ / ಕಂಪನಿ / ಪಾಲುದಾರಿಕೆ ಸಂಸ್ಥೆಯಿಂದ ಸರ್ಕಾರಕ್ಕೆ ರಾಜಧನ / ದಂಡ ಹಾಗೂ ಇತರೆ ಯಾವುದೇ ಬಾಕಿ ಪಾವತಿಯಾಗದಿದ್ದ / ಪಾವತಿಯಾಗದೇ ಇರುವ ಅರ್ಜಿಗಳು.

vii. ನಿಯಮ 3-F ಮತ್ತು ಅಧ್ಯಾಯ-IV ರಡಿ ಕಲ್ಲು ಗಣಿ ಗುತ್ತಿಗೆ ಮಂಜೂರಾತಿಗೆ ಜಿಲ್ಲಾ ಟಾಸ್ಕ್‌ಫೋರ್ಸ್ (ಗಣಿ) ಸಮಿತಿಯಿಂದ ಅಧಿಸೂಚಿಸಿದ ಪ್ರದೇಶಗಳ ಮೇಲೆ ಅತಿವ್ಯಾಪ್ತಿಯಾಗುವ ಅರ್ಜಿಗಳು.

viii. ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 6(2) ರಲ್ಲಿ ನಿರ್ದಿಷ್ಟಪಡಿಸಿರುವ ಅಂತರವನ್ನು ಪೂರೈಸದ ಅರ್ಜಿಗಳು.

ix. ಅರ್ಜಿತ ಪ್ರದೇಶವು ಮೇಲೆ ಪ್ರಸ್ತಾಪಿಸಲಾದ ಅಂಶಗಳಲ್ಲಿ ಅತಿವ್ಯಾಪ್ತಿಯಾಗುವ ಪ್ರದೇಶವನ್ನು ಹೊರತುಪಡಿಸಿ ಉಳಿದ ಪ್ರದೇಶವು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 15-A ರ ಷೆಡ್ಯೂಲ್ II ರಲ್ಲಿ ನಿರ್ದಿಷ್ಟಪಡಿಸಿರುವ ವಿಸ್ತೀರ್ಣಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ಅರ್ಜಿಗಳು.

D. ಎಂ-ಸ್ಯಾಂಡ್ ಉತ್ಪಾದನೆಗಾಗಿ ಕಟ್ಟಡ ಕಲ್ಲು ಗಣಿ ಗುತ್ತಿಗೆ ಮಂಜೂರಾತಿ ಕೋರಿ ಮೇಲೆ ಕ್ರಮ ಸಂಖ್ಯೆ (C) ರಲ್ಲಿ ವಿವರಿಸಿರುವ ಮಾನದಂಡಗಳನ್ನು ಪೂರೈಸಿರುವ ಅರ್ಜಿಗಳನ್ನು ಪರಿಶೀಲಿಸಿ, ಅರ್ಜಿದಾರ / ಸಂಸ್ಥೆ / ಕಂಪನಿ / ಪಾಲುದಾರಿಕೆ ಸಂಸ್ಥೆಯು ಒಂದಕ್ಕಿಂತ ಹೆಚ್ಚಿನ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಆತನು ಇಚ್ಛಿಸುವ ಒಂದು ಅರ್ಜಿಯನ್ನು ಈ ಕೆಳಕಂಡ ಆದ್ಯತೆಗಳನುಸಾರ ಮಂಜೂರಾತಿಗೆ ಪರಿಗಣಿಸುವುದು: -

1) ಅರ್ಜಿದಾರ / ಸಂಸ್ಥೆ / ಕಂಪನಿ / ಪಾಲುದಾರಿಕೆ ಸಂಸ್ಥೆಯು ಈಗಾಗಲೇ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011 ರಂತೆ ಕ್ರಷರ್ ಲೈಸೆನ್ಸ್ (Form-C) ಪಡೆದು ಎಂ-ಸ್ಯಾಂಡ್ ಉತ್ಪಾದಿಸುತ್ತಿದ್ದು, ಎಂ-ಸ್ಯಾಂಡ್ ಘಟಕವಿರುವ ಪ್ರದೇಶದಿಂದ 30 ಕಿಲೋ ಮೀಟರ್ ವ್ಯಾಪ್ತಿಯೊಳಗೆ ಕಟ್ಟಡ ಕಲ್ಲುಗಣಿ ಗುತ್ತಿಗೆಯನ್ನು ಹೊಂದಿರದ ಅರ್ಜಿದಾರ / ಸಂಸ್ಥೆ / ಕಂಪನಿ / ಪಾಲುದಾರಿಕೆ ಸಂಸ್ಥೆಯನ್ನು ಒಂದನೇ ಆದ್ಯತೆಯಡಿ ಪರಿಗಣಿಸುವುದು.

2) ಅರ್ಜಿದಾರ / ಸಂಸ್ಥೆ / ಕಂಪನಿ / ಪಾಲುದಾರಿಕೆ ಸಂಸ್ಥೆಯು ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮದನ್ವಯ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ಜಾರಿಯಾಗುವ ಪೂರ್ವದಲ್ಲಿ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ Consent for Operation (CFO) ಪಡೆದು, ಎಂ-ಸ್ಯಾಂಡ್ ಘಟಕವಿರುವ ಪ್ರದೇಶದಿಂದ 30 ಕಿಲೋ ಮೀಟರ್ ವ್ಯಾಪ್ತಿಯೊಳಗೆ ಕಟ್ಟಡ ಕಲ್ಲುಗಣಿ ಗುತ್ತಿಗೆಯನ್ನು ಹೊಂದಿರದ ಅರ್ಜಿದಾರ / ಸಂಸ್ಥೆ / ಕಂಪನಿ / ಪಾಲುದಾರಿಕೆ ಸಂಸ್ಥೆಯನ್ನು ಎರಡನೇ ಆದ್ಯತೆಯಡಿ ಪರಿಗಣಿಸುವುದು.

3) ಅರ್ಜಿದಾರ / ಸಂಸ್ಥೆ / ಕಂಪನಿ / ಪಾಲುದಾರಿಕೆ ಸಂಸ್ಥೆಯು ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011 ರಂತೆ ಎಂ-ಸ್ಯಾಂಡ್ ಘಟಕ ಹೊಂದಿದ್ದು, ಸದರಿ ಘಟಕದ 30 ಕಿಲೋ ಮೀಟರ್ ವ್ಯಾಪ್ತಿಯೊಳಗೆ ಕಟ್ಟಡ ಕಲ್ಲುಗಣಿ ಗುತ್ತಿಗೆಗಳನ್ನು ಹೊಂದಿದ್ದು, ದಿನಾಂಕ 17.03.2023ರ ಪೂರ್ವದಲ್ಲಿ ಚಾಲ್ತಿಯಲ್ಲಿದ್ದ Consent for Operation (CFO) ದಲ್ಲಿ ನಮೂದಿಸಿರುವಂತೆ ಎಂ-ಸ್ಯಾಂಡ್ ಉತ್ಪಾದಿಸಲು ಕಚ್ಚಾ ಕಟ್ಟಡ ಕಲ್ಲಿನ ಕೊರತೆ ಇರುವ ಅರ್ಜಿಗಳನ್ನು ಮೂರನೇ ಆದ್ಯತೆಯಡಿ ಪರಿಗಣಿಸುವುದು.

4) ಅರ್ಜಿದಾರ / ಸಂಸ್ಥೆ / ಕಂಪನಿ / ಪಾಲುದಾರಿಕೆ ಸಂಸ್ಥೆಯು ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮದನ್ವಯ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ದಿನಾಂಕ 17.03.2023ರ

ಪೂರ್ವದಲ್ಲಿ CFE ಪಡೆದು, 30 ಕಿಲೋ ಮೀಟರ್ ವ್ಯಾಪ್ತಿಯೊಳಗೆ ಕಟ್ಟಡ -- ಕಲ್ಲುಗಣಿ ಗುತ್ತಿಗೆಗಳನ್ನು ಹೊಂದಿರದಿದ್ದಲ್ಲಿ, ಅಂತಹ ಅರ್ಜಿಗಳನ್ನು ನಾಲ್ಕನೇ ಆದ್ಯತೆಯಡಿ ಪರಿಗಣಿಸುವುದು. ಪರಿಗಣಿಸಲ್ಪಟ್ಟ ಅರ್ಜಿದಾರನು ಗುತ್ತಿಗೆ ಮಂಜೂರಾದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಎಂ-ಸ್ಯಾಂಡ್ ಕ್ರಷರ್ ಘಟಕವನ್ನು ಸ್ಥಾಪಿಸಿ ಎಂ-ಸ್ಯಾಂಡ್ ಉತ್ಪಾದಿಸಿ, ಸಾಗಾಣಿಕೆ ಮಾಡತಕ್ಕದ್ದು. ತಪ್ಪಿದಲ್ಲಿ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ರವರು ಸದರಿ ಗುತ್ತಿಗೆಯನ್ನು ರದ್ದುಪಡಿಸಲು ಕ್ರಮ ವಹಿಸುವುದು.

5) ಕ್ರಮ ಸಂಖ್ಯೆ 1), 2), 3) ಮತ್ತು 4) ರ ಆದ್ಯತೆಯನ್ನು ಪರಿಗಣಿಸಿದ ನಂತರವೂ ಒಂದೇ ಪ್ರದೇಶದ ಮೇಲೆ ಆಯಾ ಆದ್ಯತೆಯಡಿ ಒಂದಕ್ಕಿಂತ ಹೆಚ್ಚು ಅರ್ಜಿಗಳು ಅತಿವ್ಯಾಪ್ತಿಯಾದ ಸಂದರ್ಭದಲ್ಲಿ ಎಲ್ಲಾ ಅರ್ಹ ಅರ್ಜಿಗಳನ್ನು ಪರಿಗಣಿಸಿ, ಸದರಿ ಅರ್ಜಿದಾರರ ಪೈಕಿ ಕಲ್ಲುಗಣಿ ಗುತ್ತಿಗೆ ಕೋರಿ ಅರ್ಜಿ ಸಲ್ಲಿಸಿರುವ ಪ್ರದೇಶವು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ / Consent for Operation (CFO) ಹೊಂದಿರುವ ಎಂ-ಸ್ಯಾಂಡ್ ಘಟಕ /ಎಂ-ಸ್ಯಾಂಡ್ ಘಟಕ ಸ್ಥಾಪಿಸಲು ಉದ್ದೇಶಿಸಿರುವ (Consent for Establishment ಹೊಂದಿರುವ) ಪ್ರದೇಶಕ್ಕೆ ಸಮೀಪವಿರುವ (Nearest) ಅರ್ಜಿದಾರನಿಗೆ ಆದ್ಯತೆ ಮೂಲಕ ಗುತ್ತಿಗೆ ಮಂಜೂರಾತಿದಾರರನ್ನು ಆಯ್ಕೆ ಮಾಡುವುದು.

ಪರಂತು, ಒಂದೇ ಪ್ರದೇಶದ ಮೇಲೆ ಒಂದಕ್ಕಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತಗೊಂಡು ಭಾಗಶಃ ಪ್ರದೇಶವು ಅತಿವ್ಯಾಪ್ತಿಗೊಂಡಿದ್ದಲ್ಲಿ ಅರ್ಜಿತ ಪ್ರದೇಶದ ವಿಸ್ತೀರ್ಣವು ಷೆಡ್ಯೂಲ್ II-A ರಲ್ಲಿ ನಿಗದಿಪಡಿಸಿರುವ 02-00 ಎಕರೆಗಿಂತ ಹೆಚ್ಚಿನ ಪ್ರದೇಶವು ಮುಕ್ತವಾಗಿದ್ದಲ್ಲಿ ಅಂತಹ ಅರ್ಜಿಗಳನ್ನು ಮೇಲಿನ ಕ್ರಮ ಸಂಖ್ಯೆ 1), 2), 3) ಮತ್ತು 4) ರ ಆದ್ಯತೆಯಡಿ ಪರಿಗಣಿಸುವುದು.

E. ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 31-ZC ರಡಿ ಸ್ವೀಕೃತವಾಗಿರುವ ಅರ್ಜಿಗಳಲ್ಲಿ ಅತಿವ್ಯಾಪ್ತಿ ಪ್ರಕರಣಗಳು ಕಂಡುಬಂದಲ್ಲಿ, ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ ವಿಲೇವಾರಿಗೊಳಿಸುವುದು.

a. ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ನಿಯಮ 31-ZC ರಡಿ ಸ್ವೀಕೃತವಾದ ಅರ್ಜಿತ ಪ್ರದೇಶಗಳ ಮೇಲೆ, ತಿದ್ದುಪಡಿ ನಿಯಮಗಳು, 2023 ರಡಿ ಸ್ವೀಕೃತವಾದ ಅರ್ಜಿಗಳ ಪ್ರದೇಶಗಳು ಭಾಗಶಃ ಅತಿವ್ಯಾಪ್ತಿಯಾದಲ್ಲಿ, ತಿದ್ದುಪಡಿ ನಿಯಮಗಳು, 2016 ರಂತೆ ಸ್ವೀಕೃತವಾದ ಅರ್ಜಿಗಳನ್ನು ಪರಿಗಣಿಸುವುದು. ಅಂತಹ ಅರ್ಜಿಗಳ ವಿಲೇವಾರಿಯಾದ ನಂತರ ಒಂದು ವೇಳೆ ಅತಿವ್ಯಾಪ್ತಿಯಾಗಿ ಉಳಿಕೆಯಾದ ಪ್ರದೇಶವು ಶೆಡ್ಯೂಲ್ II-A ರಲ್ಲಿ ನಿಗದಿಪಡಿಸಿರುವ ಕನಿಷ್ಠ ವಿಸ್ತೀರ್ಣಕ್ಕಿಂತ ಹೆಚ್ಚಿದ್ದಲ್ಲಿ ವೈಜ್ಞಾನಿಕ ಮತ್ತು ವ್ಯವಸ್ಥಿತ ಗಣಿಗಾರಿಕೆ ನಡೆಸಲು ಕಾರ್ಯ ಸಾಧುವಿದ್ದಲ್ಲಿ ಅಂತಹ ಪ್ರದೇಶವನ್ನು ತಿದ್ದುಪಡಿ ನಿಯಮಗಳು, 2023 ರಡಿ ಸ್ವೀಕೃತವಾದ ಅರ್ಜಿಗಳ ಮಂಜೂರಾತಿಗೆ ಕ್ರಮ ವಹಿಸುವುದು.

b. ಕರ್ನಾಟಕ ಉಪಖನಿಜ ರಿಯಾಯಿತಿ(ತಿದ್ದುಪಡಿ) ನಿಯಮಗಳು, 2016 ನಿಯಮ 31-ZC ರಡಿ ಸ್ವೀಕೃತವಾದ ಅರ್ಜಿಗಳ ಪ್ರದೇಶಗಳು ಒಂದಕ್ಕೊಂದು ಅತಿವ್ಯಾಪ್ತಿಯಾದಲ್ಲಿ ಕಂಡಿಕೆ 4 ರ ಕ್ರಮ ಸಂಖ್ಯೆ (D) ರಂತೆ ಪರಿಗಣಿಸಿ ವಿಲೇವಾರಿಗೊಳಿಸುವುದು.

c. ಕರ್ನಾಟಕ ಉಪಖನಿಜ ರಿಯಾಯಿತಿ(ತಿದ್ದುಪಡಿ) ನಿಯಮಗಳು, 2023 ನಿಯಮ 31-ZC ರಡಿ ಸ್ವೀಕೃತವಾದ ಅರ್ಜಿಗಳ ಪ್ರದೇಶಗಳು ಒಂದಕ್ಕೊಂದು ಅತಿವ್ಯಾಪ್ತಿ ಯಾಗಿದ್ದಲ್ಲಿ, ಕಂಡಿಕೆ 4 ರ ಕ್ರಮ ಸಂಖ್ಯೆ (D) ರಂತೆ ಪರಿಗಣಿಸಿ ವಿಲೇವಾರಿಗೊಳಿಸುವುದು.

5. ಆದ್ಯತೆಯಡಿ ಅರ್ಹವಾದ ಅರ್ಜಿಗಳಿಗೆ ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ ಕಲ್ಲು ಗಣಿ ಗುತ್ತಿಗೆ ಮಂಜೂರಾತಿಗೆ ಕ್ರಮ ವಹಿಸುವುದು.

   i. ಅರ್ಜಿತ ಪ್ರದೇಶವನ್ನು ಸಂಬಂಧಪಟ್ಟ ಭೂವಿಜ್ಞಾನಿ ಮತ್ತು ಸಹಾಯಕ / ಕಿರಿಯ ಅಭಿಯಂತರರು ಜಂಟಿಯಾಗಿ ಸ್ಥಳ ತನಿಖೆ ನಡೆಸಿ, ಅರ್ಜಿತ ಪ್ರದೇಶದಲ್ಲಿ ದೊರೆಯುವ ಕಟ್ಟಡ ಕಲ್ಲಿನ ನಿಕ್ಷೇಪವು ಎಂ-ಸ್ಯಾಂಡ್ ಉತ್ಪಾದನೆಗೆ ಸೂಕ್ತವಿರುವ ಕುರಿತು ಪ್ರತ್ಯೇಕವಾಗಿ ತಾಂತ್ರಿಕ ವರದಿಯನ್ನು ನೀಡುವುದು.

   ii. ಅರ್ಜಿದಾರರು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 8(5) ರಂತೆ ಕಂದಾಯ ಮತ್ತು ಅರಣ್ಯ ಇಲಾಖೆಯ ನಿರಾಕ್ಷೇಪಣಾ ಪತ್ರ ಪಡೆಯುವುದು.

   iii. ಗಣಿಗಾರಿಕೆಗೆ ಕೋರಿರುವ ಪ್ರದೇಶದ ವಿಸ್ತೀರ್ಣಕ್ಕೆ ಅನುಗುಣವಾಗಿ ಮೋಜಣಿ ಶುಲ್ಕ ಪ್ರತಿ ಎಕರೆಗೆ ₹2,000/- ಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಪಾವತಿಸಿಕೊಂಡು ಭೂ ದಾಖಲೆಗಳ ಇಲಾಖೆಯ ಸಹಯೋಗದೊಂದಿಗೆ ಜಂಟಿ ಮೋಜಣಿ ಕೈಗೊಂಡು DGPS ಉಪಕರಣದ ಮೂಲಕ ಗಡಿ ಬಾಂದುಗಳ ಅಕ್ಷಾಂಶ-ರೇಖಾಂಶಗಳನ್ನು ದಾಖಲಿಸಿ, ಗಡಿ ಗುರುತು ಕಲ್ಲುಗಳನ್ನು ಸ್ಥಾಪಿಸಿ, ಸಂಬಂಧಪಟ್ಟ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿದ ಜಂಟಿ ಮೋಜಣಿ ವರದಿ ಮತ್ತು DGPS ನಿರ್ದೇಶಾಂಕಗಳನ್ನು ಒಳಗೊಂಡ ನಕಾಶೆಯನ್ನು ಪಡೆಯುವುದು.

   iv. DGPS and Drone ಉಪಕರಣ ಬಳಸಿ ಅರ್ಜಿತ ಪ್ರದೇಶದ ಸರ್ವೆ ಕಾರ್ಯ ಕೈಗೊಂಡು, Detailed Surface Plan ನ್ನು ತಯಾರಿಸಿ, Reference Level / Reduced Level ಗಳನ್ನು ದಾಖಲಿಸಿ, ಪ್ರಸ್ತುತ ಭೂಮಟ್ಟವನ್ನು ಘನೀಕರಿಸಿ ದೃಢೀಕರಿಸಿದ ವರದಿಯನ್ನು ಸಲ್ಲಿಸುವುದು ಮತ್ತು ಸರ್ವೇ ಕಾರ್ಯಕ್ಕೆ ತಗಲುವ ವೆಚ್ಚವನ್ನು ಅರ್ಜಿದಾರರು ಭರಿಸತಕ್ಕದ್ದು.

   v. ಮೇಲಿನ ಎಲ್ಲಾ ದಾಖಲೆ ಮತ್ತು ಅಂಶಗಳು ಪೂರಕವಾಗಿದ್ದಲ್ಲಿ ಅರ್ಜಿದಾರರಿಗೆ ಕಲ್ಲು ಗಣಿ ಗುತ್ತಿಗೆ ಮಂಜೂರಾತಿ ನೀಡಿ, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಮೂನೆ GL ನಲ್ಲಿ ಸಕ್ಷಮ ಪ್ರಾಧಿಕಾರಿಯು ಅಧಿಸೂಚನೆ ಜಾರಿ ಮಾಡುವುದು.

6. ಅಧಿಸೂಚನೆ ಜಾರಿಯಾದ ನಂತರ ಮಂಜೂರಾತಿದಾರರು ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸುವುದು:-

   i. ಮಂಜೂರಾತಿದಾರರು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 8(1-A) ರಂತೆ ಅನುಮೋದಿತ ಕ್ವಾರಿ ಯೋಜನೆ ಮತ್ತು ಸಂಬಂಧಪಟ್ಟ ಪ್ರಾಧಿಕಾರ (SEIAA / MoEF) ದಿಂದ ಪರಿಸರ ಅನುಮತಿ ಪತ್ರ ಪಡೆದು ಸಲ್ಲಿಸುವುದು.

   ii. ಮಂಜೂರಾತಿದಾರರಿಂದ ಮುಂಗಡ ರಾಜಧನ, ಪರಿಸರ ಸಂರಕ್ಷಣಾ ಶುಲ್ಕ, Upfront Payment ನ್ನು Bank Guarantee ಮೂಲಕ ಹಾಗೂ ಇನ್ನಿತರೆ ಅನ್ವಯಿಕ ಶುಲ್ಕಗಳನ್ನು ಪಾವತಿಸಿಕೊಂಡು ನಮೂನೆ-ಇ ರಲ್ಲಿ ಕಲ್ಲು ಗಣಿ ಗುತ್ತಿಗೆ ಕರಾರು ದಸ್ತಾವೇಜು ಅಮಲ್ಜಾರಿ ಮಾಡುವುದು.

   iii. ಕಲ್ಲು ಗಣಿ ಗುತ್ತಿಗೆದಾರರು ಕರಾರು ದಸ್ತಾವೇಜನ್ನು ಸಂಬಂಧಪಟ್ಟ ಉಪ ನೋಂದಣಾಧಿಕಾರಿಯವರ ಕಛೇರಿಯಲ್ಲಿ ಕರಾರು ಅಮಲ್ಜಾರಿಯಾದ ದಿನಾಂಕದಿಂದ 90 ದಿನಗಳೊಳಗಾಗಿ ನೋಂದಾಯಿಸಿ ಸಲ್ಲಿಸಿದ ನಂತರ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ILMS ತಂತ್ರಾಂಶದಲ್ಲಿ ನೋಂದಾಯಿಸುವುದು.

iv. ಅಗತ್ಯವಿರುವ ಪ್ರಕರಣಗಳಲ್ಲಿ ಕಲ್ಲು ಗಣಿ ಗುತ್ತಿಗೆ ಪ್ರದೇಶದಲ್ಲಿ ಗಣಿ ಚಟುವಟಿಕೆ ಪ್ರಾರಂಭಿಸುವ ಪೂರ್ವದಲ್ಲಿ Mines Act, 1952 ರ section 3 ರಂತೆ Director General Mines Safety (DGMS) ರವರಿಂದ ಅನುಮತಿ ಪಡೆಯುವುದು.

v. ಕಲ್ಲು ಗಣಿ ಗುತ್ತಿಗೆ ಮಂಜೂರಾತಿ ಪ್ರದೇಶದಲ್ಲಿ ಗುತ್ತಿಗೆದಾರರು ತೆಗೆದ ಉಪಖನಿಜದ ಸಾಗಾಣಿಕೆಗೆ ಖನಿಜ ರವಾನೆ ಪರವಾನಗಿ ವಿತರಿಸುವ ಮುನ್ನ ಶೆಡ್ಯೂಲ್-II ರಲ್ಲಿ ನಿಗದಿಪಡಿಸಿರುವ ರಾಜಧನ, ರಾಜಧನದ ಶೇಕಡ 40 ರಷ್ಟು ಹೆಚ್ಚುವರಿ ಪಾವತಿ (Additional Payment) ಮೊತ್ತ, ರಾಜಧನದ ಶೇಕಡ 10 ರಷ್ಟು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ವಂತಿಕೆ (DMF) ಹಾಗೂ ಇತರೆ ಅನ್ವಯಿಕ ಶುಲ್ಕಗಳನ್ನು ಪಾವತಿಸಿಕೊಂಡು ಖನಿಜ ರವಾನೆ ಪರವಾನಗಿ ನೀಡಲು ಕ್ರಮ ವಹಿಸುವುದು.

vi. ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 31-ZC ರಡಿ ಕಲ್ಲು ಗಣಿ ಗುತ್ತಿಗೆ ಮಂಜೂರಾತಿಯು ಎಂ-ಸ್ಯಾಂಡ್ ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶ ಹೊಂದಿರುತ್ತದೆ. ಈ ನಿಯಮದಡಿ ಕಲ್ಲು ಗಣಿ ಗುತ್ತಿಗೆ ಕರಾರು ಪತ್ರ ನೋಂದಣಿಯಾದ ಒಂದು ವರ್ಷದೊಳಗಾಗಿ ಗುತ್ತಿಗೆದಾರರು ಗಣಿಗಾರಿಕೆಯನ್ನು ಪ್ರಾರಂಭಿಸತಕ್ಕದ್ದು. ನಂತರ ಎರಡನೇ ವರ್ಷದಿಂದ ಪರಿಸರ ಅನುಮತಿ ಪತ್ರದಲ್ಲಿ ನಿಗದಿಪಡಿಸಿರುವ ಪ್ರಮಾಣದ ಕನಿಷ್ಠ ಶೇಕಡ 50 ರಷ್ಟು ಪ್ರಮಾಣದ ಎಂ-ಸ್ಯಾಂಡ್ ನ್ನು ಕಡ್ಡಾಯವಾಗಿ ಉತ್ಪಾದಿಸಿ ಸಾಗಾಣಿಕೆ ಮಾಡತಕ್ಕದ್ದು. ಸದರಿ ಪ್ರಮಾಣವನ್ನು ಉತ್ಪಾದಿಸಲು ಗುತ್ತಿಗೆದಾರನು ವಿಫಲವಾದಲ್ಲಿ ಶೇಕಡ 50 ರಷ್ಟು ಪ್ರಮಾಣಕ್ಕೆ ಸಮನಾದ ರಾಜಧನ, ಮತ್ತು ರಾಜಧನದ ಶೇಕಡ 40 ರಷ್ಟು ಹೆಚ್ಚುವರಿ ಪಾವತಿ (Additional Payment) ಮೊತ್ತ, ರಾಜಧನದ ಶೇಕಡ 10 ರಷ್ಟು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ವಂತಿಕೆ (DMF) ಯನ್ನು ಪಾವತಿಸತಕ್ಕದ್ದು. ಅಂತಹ ವಿಫಲತೆಯು ಗುತ್ತಿಗೆ ಅವಧಿಯಲ್ಲಿ ಗರಿಷ್ಠ ಮೂರು ಬಾರಿ ಪುನರಾವರ್ತನೆಯಾದಲ್ಲಿ, ಸದರಿ ಗುತ್ತಿಗೆಯನ್ನು ರದ್ದುಪಡಿಸಲು ಕ್ರಮ ವಹಿಸುವುದು. ಸದರಿ ಗುತ್ತಿಗೆ ರದ್ದುಪಡಿಸುವ ಪೂರ್ವದಲ್ಲಿ ಗುತ್ತಿಗೆದಾರರಿಗೆ ನೈಸರ್ಗಿಕ ನ್ಯಾಯ ತತ್ವದಡಿ ಅಹವಾಲು ಸಲ್ಲಿಸಲು ಅವಕಾಶ ನೀಡತಕ್ಕದ್ದು.

vii. ಎಂ-ಸ್ಯಾಂಡ್ ಘಟಕದ ಮಾಲೀಕರು / ಗುತ್ತಿಗೆದಾರರು ಕ್ರಷರ್ ಘಟಕದಲ್ಲಿ ಉತ್ಪಾದಿಸುವ ಎಂ-ಸ್ಯಾಂಡ್ ನ್ನು ಕಡ್ಡಾಯವಾಗಿ ಭಾರತೀಯ ಗುಣಮಟ್ಟ ಮಾನಕ **(IS: 383-2016)** ದಂತೆ, ಎಂ-ಸ್ಯಾಂಡ್ ಉತ್ಪಾದಿಸಿ, ಮಾರಾಟ ಮಾಡತಕ್ಕದ್ದು. ಒಂದು ವೇಳೆ ಈ ರೀತಿ ಮಾಡಲು ವಿಫಲವಾದಲ್ಲಿ ಜಿಲ್ಲಾ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿ ಯವರಿಂದ ವರದಿಯನ್ನು ಪಡೆದು ಗುತ್ತಿಗೆಯನ್ನು ರದ್ದುಪಡಿಸುವ ಪೂರ್ವದಲ್ಲಿ ಗುತ್ತಿಗೆದಾರರಿಗೆ ನೈಸರ್ಗಿಕ ನ್ಯಾಯ ತತ್ವದಡಿ ಅಹವಾಲು ಸಲ್ಲಿಸಲು ಅವಕಾಶ ನೀಡಿ, ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು ನಿಯಮಾನುಸಾರ ಅಗತ್ಯ ಕ್ರಮ ವಹಿಸುವುದು.

viii. ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸಂಬಂಧಪಟ್ಟ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿ ರವರು ಗುತ್ತಿಗೆದಾರನಿಂದ ಉತ್ಪಾದಿಸಲ್ಪಟ್ಟ ಎಂ-ಸ್ಯಾಂಡ್ ನ ಮಾದರಿಯನ್ನು ಸಂಗ್ರಹಿಸಿ ಅಧಿಕೃತಗೊಳಿಸಲಾದ ಪ್ರಯೋಗ ಶಾಲೆಗಳಲ್ಲಿ ಪರೀಕ್ಷೆ ನಡೆಸಿ, ಪ್ರತಿ ತ್ರೈಮಾಸಿಕ ವರದಿ ಪಡೆಯುವುದು. ಒಂದು ವೇಳೆ ಎಂ-ಸ್ಯಾಂಡ್ ಮಾದರಿ ನಿರ್ಮಾಣ ಕಾಮಗಾರಿಗಳಿಗೆ ಬಳಕೆ ಮಾಡಲು ಯೋಗ್ಯ ಮಟ್ಟದಲ್ಲಿ ಇಲ್ಲವೆಂದು ದೃಢಪಟ್ಟಲ್ಲಿ ಜಿಲ್ಲಾ ಸ್ಟೋನ್ ಕ್ರಷರ್ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದಿಂದ ಎಂ-ಸ್ಯಾಂಡ್ ಉತ್ಪಾದನಾ ಘಟಕವನ್ನು ತಕ್ಷಣ ಸ್ಥಗಿತಗೊಳಿಸಿ ನಿಯಮಾನುಸಾರ ಕ್ರಮ ವಹಿಸುವುದು.

ix. ನಿಯಮ 31-ZC ರಂತೆ, ಎಂ-ಸ್ಯಾಂಡ್ ಉತ್ಪಾದಿಸುವ ಉದ್ದೇಶಕ್ಕಾಗಿ ಕಟ್ಟಡ ಕಲ್ಲು ಗಣಿಗಾರಿಕೆಗೆ ಮಂಜೂರಾಗಿರುವ ಗುತ್ತಿಗೆ ಪ್ರದೇಶದಲ್ಲಿ ಅಲಂಕಾರಿಕ ಶಿಲೆ ಕಂಡುಬಂದಲ್ಲಿ, ಕೂಡಲೇ ಸದರಿ ಕಟ್ಟಡ ಕಲ್ಲು ಗಣಿ ಗುತ್ತಿಗೆಯನ್ನು ರದ್ದುಪಡಿಸಲು ನಿಯಮಾನುಸಾರ ಕ್ರಮ ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(**ಶಿವಪ್ರಕಾಶ**)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಗಣಿ).

**PR-368**

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 32 ರಂತೆ ಪಟ್ಟಾ ಜಮೀನು ಗಳಲ್ಲಿ ಉಪಖನಿಜ (ಮರಳು ಹೊರತುಪಡಿಸಿ) ಗಣಿಗಾರಿಕೆಗೆ ಕ್ವಾರಿಯಿಂಗ್ ಪರವಾನಗಿ ಮಂಜೂರಾತಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳು.

**ಓದಲಾಗಿದೆ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ-ಎಂಎಂಎನ್/205/2023, ದಿನಾಂಕ 17.03.2023.
2. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಪತ್ರಗಳ ಸಂಖ್ಯೆ
   a. ಗಭೂಇ/ಉನಿ(ಖ.ಆ)/ಕಗಗು/ತಿ.ನಿ.-01/2023-24/1105, ದಿನಾಂಕ 13.06.2023.
   b. ಗಭೂಇ/ಉನಿ(ಖ.ಆ)/ಕಗಗು/ತಿ.ನಿ.-01/2023-24/4670, ದಿನಾಂಕ 04.09.2023.

*******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಅಧಿಸೂಚನೆಯಲ್ಲಿ, ರಾಜ್ಯ ಸರ್ಕಾರವು, ದಿನಾಂಕ 17.03.2023 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ನ್ನು ಜಾರಿಗೆ ತಂದಿರುತ್ತದೆ. ಸದರಿ ತಿದ್ದುಪಡಿ ನಿಯಮಗಳ ಅಧ್ಯಾಯ-V ರಲ್ಲಿನ ನಿಯಮ 32 ರಂತೆ ಪಟ್ಟಾ ಜಮೀನುಗಳಲ್ಲಿ ಉಪಖನಿಜ ಗಣಿಗಾರಿಕೆಗೆ ಕ್ವಾರಿಯಿಂಗ್ ಪರವಾನಗಿ ಮಂಜೂರಾತಿಗೆ ಆಯಾ ಜಿಲ್ಲೆಯ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿಯವರು ಸಕ್ಷಮ ಪ್ರಾಧಿಕಾರವಾಗಿರುತ್ತಾರೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರಗಳಲ್ಲಿ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರಂತೆ ಪಟ್ಟಾ ಜಮೀನುಗಳಲ್ಲಿ ಉಪಖನಿಜ (ಮರಳು ಹೊರತುಪಡಿಸಿ) ಗಣಿಗಾರಿಕೆಗೆ ಪರವಾನಗಿ ಮಂಜೂರಾತಿಗೆ ಸಂಬಂಧಿಸಿದಂತೆ ನಿಯಮಗಳನ್ನು ಅನುಷ್ಠಾನಗೊಳಿಸುವಲ್ಲಿ ಅನುಸರಿಸುವ ಕ್ರಮಗಳ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸುವಂತೆ ಕೋರುತ್ತಾ, ಕರಡು ಮಾರ್ಗಸೂಚಿಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

3. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 32(2) ರನ್ವಯ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಸಿಐ-ಎಂಎಂಎನ್/106/2023, ಬೆಂಗಳೂರು, ದಿನಾಂಕ :11.09.2023.</u>**

4. ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 32 ರಂತೆ ಪಟ್ಟಾ ಜಮೀನುಗಳಲ್ಲಿ ಉಪಖನಿಜ ಗಣಿಗಾರಿಕೆಗೆ ಕ್ವಾರಿಯಿಂಗ್ ಪರವಾನಗಿ ಮಂಜೂರಾತಿ ಸಂಬಂಧ ಅನುಸರಿಸುವ ಕ್ರಮಗಳ ಬಗ್ಗೆ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ಮತ್ತು ನಂತರದ ತಿದ್ದುಪಡಿ ನಿಯಮಗಳನ್ವಯ ಸಕ್ಷಮ ಪ್ರಾಧಿಕಾರಗಳ ಕಾರ್ಯ ನಿರ್ವಹಣೆಗೆ ಸಹಕಾರಿಯಾಗುವಂತೆ ಈ ಕೆಳಕಂಡ ಮಾರ್ಗಸೂಚಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

**ಮಾರ್ಗಸೂಚಿಗಳು:**

I. ಅರ್ಜಿದಾರರು, ಪಟ್ಟಾ ಜಮೀನುಗಳಲ್ಲಿ ಕ್ವಾರಿಯಿಂಗ್ ಲೈಸೆನ್ಸ್ ಮಂಜೂರಾತಿ ಕೋರಿ ಸಲ್ಲಿಸುವ ನಮೂನೆ AQL ಅರ್ಜಿಯೊಂದಿಗೆ ಈ ಕೆಳಕಂಡ ಮೂಲ ಅಥವಾ ದೃಢೀಕೃತ ದಾಖಲಾತಿಗಳನ್ನು ಸಂಬಂಧಪಟ್ಟ ಉಪನಿರ್ದೇಶಕರು / ಹಿರಿಯ ಭೂವಿಜ್ಞಾನಿಗಳ ಕಚೇರಿಗೆ ಸಲ್ಲಿಸತಕ್ಕದ್ದು.

a. ಅರ್ಜಿ ಶುಲ್ಕ:- ನಿರ್ದಿಷ್ಟ ಉಪಖನಿಜಗಳ ಅರ್ಜಿಗಳಿಗೆ ₹ 10,000/- ಮತ್ತು ನಿರ್ದಿಷ್ಟವಲ್ಲದ ಉಪಖನಿಜ ಅರ್ಜಿಗಳಿಗೆ ₹ 5,000- ಗಳ ಹಿಂದಿರುಗಿಸಲಾಗದ ಮೊತ್ತವನ್ನು ಖಜಾನೆ ಚಲನ್ ಮೂಲಕ ಪಾವತಿಸತಕ್ಕದ್ದು.

b. ಪಹಣಿ ಪತ್ರಿಕೆ (RTC), ಕಲಂ-11 ರಲ್ಲಿ ಯಾವುದಾದರೂ ಋಣಭಾರಗಳು ಇದ್ದಲ್ಲಿ ಸಂಬಂಧಪಟ್ಟ ಬ್ಯಾಂಕ್ / ಸಹಕಾರಿ ಸಂಘಗಳಿಂದ ಬೇಬಾಕಿ ಪತ್ರ ಅಥವಾ ಬೋಜ / ಋಣಭಾರ ರಹಿತ ದೃಢೀಕೃತ ಪಹಣಿ ಪತ್ರಿಕೆ (RTC) ಗಳನ್ನು ಸಲ್ಲಿಸುವುದು.

c. ಗ್ರಾಮ ನಕಾಶೆ (1"=660" ಅಥವಾ 1:330" Scale) ಯಲ್ಲಿ ಅರ್ಜಿತ ಪಟ್ಟಾ ಪ್ರದೇಶವನ್ನು ಗುರುತಿಸುವುದು.

d. ಮ್ಯೂಟೇಶನ್ ಪ್ರತಿ.

e. ಆಕಾರ್ ಬಂದ್ (ಫಾರಂ 10).

f. ಹಿಸ್ಸಾ/ಪೋಡಿ ನಕಾಶೆ,

g. ಕಲ್ಲುಗಣಿಗಾರಿಕೆಗೆ ಉದ್ದೇಶಿಸಿರುವ ಸರ್ವೆ ನಂಬರ್ ಜಮೀನಿನ ಸ್ಕೆಚ್ ಅನ್ನು 1"=660" ಸ್ಕೇಲ್ ನಲ್ಲಿ DGPS ನಿರ್ದೇಶಾಂಕಗಳನ್ನು ನಮೂದಿಸಿ 10 ಪ್ರತಿಗಳ ನೀಲಿ ನಕಾಶೆಗಳು.

h. ವಾಸಸ್ಥಳ ದೃಢೀಕರಣಕ್ಕಾಗಿ ಚುನಾವಣಾ ಗುರುತಿನ ಚೀಟಿ / ಆಧಾರ್ ಕಾರ್ಡ್ ಇತ್ಯಾದಿ ದಾಖಲೆಗಳ ಪ್ರತಿ.

i. ಅರ್ಜಿದಾರರು ಈಗಾಗಲೇ ಗಣಿ ಗುತ್ತಿಗೆ / ಲೈಸೆನ್ಸ್ ಹೊಂದಿದ್ದಲ್ಲಿ, ಗುತ್ತಿಗೆ / ಲೈಸೆನ್ಸ್ ಗಳ ವಿವರಗಳು ಮತ್ತು ಬೇಬಾಕಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿ ರವರಿಂದ ಪಡೆದು ಸಲ್ಲಿಸುವುದು.

j. ಅರ್ಜಿದಾರರು ಕಂಪನಿ / ಉದ್ದಿಮೆ / ಸಂಸ್ಥೆ ಆಗಿದ್ದಲ್ಲಿ Indian Companies Act, 1956 ರಡಿ ಅಥವಾ ಇತರೆ ಯಾವುದೇ ಕಾಯ್ದೆಯಡಿ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ನೋಂದಣಿ ಪ್ರಮಾಣ ಪತ್ರ, ಪಾಲುದಾರಿಕೆ ಕರಾರು ಪತ್ರ (Registered Partnership Deed/Memorandum of Article) ಸಲ್ಲಿಸುವುದು.

k. ಅರ್ಜಿದಾರರ ಇತ್ತೀಚಿನ ಪಾಸ್ ಪೋರ್ಟ್ ಅಳತೆಯ 5 ಭಾವಚಿತ್ರಗಳು.

l. ಪಟ್ಟಾದಾರರ ಒಪ್ಪಿಗೆ ಪ್ರಮಾಣ ಪತ್ರ (Consent for Quarrying) ದಡಿ ಕಲ್ಲು ಗಣಿಗಾರಿಕೆಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಿದ ಪ್ರಕರಣಗಳಲ್ಲಿ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರಲ್ಲಿ ನಿಗದಿಪಡಿಸಿರುವ ನಮೂನೆ CFQ ನಲ್ಲಿ ನೋಟರಿಯೊಂದಿಗೆ ಪಟ್ಟಾ ಜಮೀನಿನ ಮಾಲೀಕರ ಒಪ್ಪಿಗೆ ಪತ್ರ - ಅಥವಾ ನೋಂದಾಯಿತ GPA ಪತ್ರದ ಆಧಾರದ ಮೇರೆಗೆ ಕಲ್ಲು ಗಣಿಗಾರಿಕೆಗೆ ಅನುಮತಿ ನೀಡಲು ಕೋರಿ ಅರ್ಜಿ ಸಲ್ಲಿಸಿದ ಪ್ರಕರಣಗಳಲ್ಲಿ ಪಟ್ಟಾ ಜಮೀನಿನ ಮಾಲೀಕರಿಂದ ಪಡೆದ GPA ಪತ್ರ.

m. ಕ್ವಾರಿಯಿಂಗ್ ಲೈಸೆನ್ಸ್ ಕೋರಿರುವ ಪಟ್ಟಾ ಜಮೀನಿನ ವಿಸ್ತೀರ್ಣವು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ತಿದ್ದುಪಡಿ ನಿಯಮಗಳ ಷೆಡ್ಯೂಲ್ II-A ರಲ್ಲಿ ನಿಗದಿಪಡಿಸಿರುವ ಕನಿಷ್ಟ ಮತ್ತು ಅದಕ್ಕಿಂತ ಹೆಚ್ಚಿನ ವಿಸ್ತೀರ್ಣವನ್ನು ಹೊಂದಿರತಕ್ಕದ್ದು.

II. ಅರ್ಜಿಯೊಂದಿಗೆ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದ ನಂತರ, ಅರ್ಜಿಯು ಪರಿಗಣನೆಗೆ ಅರ್ಹವಾಗಿದ್ದಲ್ಲಿ, ಸಂಬಂಧಪಟ್ಟ ಅರ್ಜಿದಾರರಿಗೆ ನಮೂನೆ-A ನಲ್ಲಿ ನೋಂದಾಯಿತ ಅಂಚೆ ಮೂಲಕ ಸ್ವೀಕೃತಿ ನೀಡುವುದು.

III. ಅರ್ಜಿಯೊಂದಿಗೆ ಸಲ್ಲಿಸಿರುವ DGPS ನಿರ್ದೇಶಾಂಕಗಳ ನಕ್ಷೆಯನ್ನು ಸಹಾಯಕ / ಕಿರಿಯ ಅಭಿಯಂತರರು ನಕಾಶೆ ವಿಭಾಗದಲ್ಲಿ ಪರಿಶೀಲಿಸಿ, ನಕ್ಷೆ ಮತ್ತು ನಿರ್ದೇಶಾಂಕಗಳನ್ನು ತಾಳೆ ಮಾಡಿ ವಿಸ್ತೀರ್ಣಕ್ಕೆ ಅನುಗುಣವಾಗಿ ನಕ್ಷೆ ಸಲ್ಲಿಸಿರುವ ಬಗ್ಗೆ ಹಾಗೂ ಗಣಿಗಾರಿಕೆಗೆ ಗುತ್ತಿಗೆ ಮಂಜೂರಾತಿ ನೀಡಲು ಮುಕ್ತವಿರುವ ಬಗ್ಗೆ ವರದಿ ಸಲ್ಲಿಸುವುದು.

IV. ಭೂವಿಜ್ಞಾನಿಯವರು ಮತ್ತು ಸಹಾಯಕ / ಕಿರಿಯ ಅಭಿಯಂತರರು ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿ ನಮೂನೆ-S ನಲ್ಲಿ ತಾಂತ್ರಿಕ ವರದಿಯನ್ನು ಭೂವಿಜ್ಞಾನಿಯವರು ಸಲ್ಲಿಸುವುದು. ಸದರಿ ತಾಂತ್ರಿಕ ವರದಿಯನ್ನು ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿ ರವರು ಸೂಕ್ತ ಅಭಿಪ್ರಾಯದೊಂದಿಗೆ ದೃಢೀಕರಿಸುವುದು.

V. ಅರ್ಜಿದಾರನು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 8(4) ರಂತೆ ಅನಧಿಕೃತ ಕಲ್ಲುಗಣಿ ಚಟುವಟಿಕೆ ನಡೆಸಿ ದಂಡನೀಯ ಶಿಕ್ಷೆಗೆ ಒಳಪಟ್ಟಿದ್ದಲ್ಲಿ, ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಅರ್ಹನಾಗಿರತಕ್ಕದ್ದಲ್ಲ.

VI. ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 8-A ರಂತೆ ಅರ್ಜಿತ ಪ್ರದೇಶದ ಖನಿಜದ ಲಭ್ಯತೆ ಮತ್ತು ವೈಜ್ಞಾನಿಕ ಗಣಿಗಾರಿಕೆಗೆ ಕಾರ್ಯಸಾಧುವಿರುವ ಬಗ್ಗೆ ಭೂವಿಜ್ಞಾನಿರವರಿಂದ ಪಡೆದ ತಾಂತ್ರಿಕ ವರದಿಯನ್ನು ಪರಿಶೀಲಿಸಿ, ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿಯವರು ಅಭಿಪ್ರಾಯ ದಾಖಲಿಸುವುದು.

VII. ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 8(5) ರಂತೆ ನಿರ್ದಿಷ್ಟ ಉಪಖನಿಜಕ್ಕೆ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ರವರಿಂದ ಮತ್ತು ನಿರ್ದಿಷ್ಟವಲ್ಲದ ಉಪಖನಿಜಕ್ಕೆ ಸಂಬಂಧಪಟ್ಟ ಉಪ ವಿಭಾಗಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ರವರಿಂದ ಕ್ರಮವಾಗಿ ಕಂದಾಯ ಮತ್ತು ಅರಣ್ಯ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ಪಡೆಯುವುದು.

VIII. ನಿಗದಿಪಡಿಸಿರುವ ಅವಧಿಯಲ್ಲಿ ಕಂದಾಯ ಮತ್ತು ಅರಣ್ಯ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರಗಳು ಸ್ವೀಕೃತವಾಗದಿದ್ದಲ್ಲಿ, ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ತಿದ್ದುಪಡಿ ನಿಯಮ 8(6) ರಂತೆ ಕ್ರಮವಹಿಸುವುದು.

IX. ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 8(5) ಮತ್ತು 8(6) ರಂತೆ ಕಂದಾಯ ಅಥವಾ ಅರಣ್ಯ ಇಲಾಖೆ ಅಥವಾ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ

ಕಲ್ಲುಗಣಿ ಲೈಸೆನ್ಸ್ ಮಂಜೂರಾತಿ ನೀಡಬಾರದೆಂದು ವ್ಯತಿರಿಕ್ತವಾಗಿ ವರದಿ/ ಅಭಿಪ್ರಾಯಗಳು ಸ್ವೀಕೃತವಾದಲ್ಲಿ, ಅಂತಹ ಅರ್ಜಿಗಳನ್ನು ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು/ಹಿರಿಯ ಭೂವಿಜ್ಞಾನಿ ರವರ ಹಂತದಲ್ಲಿಯೇ ತಿರಸ್ಕರಿಸುವುದು.

X. ಕಂದಾಯ ಇಲಾಖೆ, ಅರಣ್ಯ ಇಲಾಖೆ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಸ್ವೀಕೃತಗೊಂಡ ನಿರಾಕ್ಷೇಪಣಾ ಪತ್ರಗಳು ಮತ್ತು ವರದಿಯನ್ನು ಸಂಬಂಧಪಟ್ಟ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿಯವರು ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿ ಸಭೆಯಲ್ಲಿ ಮಂಡಿಸಿ, ಕ್ವಾರಿಯಿಂಗ್ ಲೈಸೆನ್ಸ್ ಮಂಜೂರಾತಿಗೆ ಅನುಮೋದನೆ ಪಡೆಯುವುದು.

XI. ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯ ಅನುಮೋದನೆ ನಂತರ ಗಣಿಗಾರಿಕೆಗೆ ಕೋರಿರುವ ಅರ್ಜಿತ ಪ್ರದೇಶದ ವಿಸ್ತೀರ್ಣಕ್ಕೆ ಅನುಗುಣವಾಗಿ ಪ್ರತಿ ಎಕರೆಗೆ ಮೋಜಣಿ ಶುಲ್ಕ ₹ 2,000/- ಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಪಾವತಿಸಿದ ನಂತರ ಗಣಿ ಮತ್ತು ಭೂವಿಜ್ಞಾನ ಇಲಾಖೆ ಮತ್ತು ಭೂದಾಖಲೆಗಳ ಇಲಾಖೆಯ ಸಕ್ಷಮ ಅಧಿಕಾರಿಗಳು ಹಾಗೂ ಅರ್ಜಿದಾರರ ಸಮಕ್ಷಮದಲ್ಲಿ ಜಂಟಿ ಮೋಜಣಿ ಕೈಗೊಂಡು DGPS ಮತ್ತು Drone ಉಪಕರಣದ ಮೂಲಕ ಗಡಿ ಬಾಂದುಗಳ ಅಕ್ಷಾಂಶ-ರೇಖಾಂಶಗಳನ್ನು ದಾಖಲಿಸಿ ಗಡಿ ಗುರುತುಗಳನ್ನು ಸ್ಥಾಪಿಸಿ, ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿದ ಜಂಟಿ ಮೋಜಣಿ ವರದಿ ಮತ್ತು DGPS ನಿರ್ದೇಶಾಂಕಗಳನ್ನು ಒಳಗೊಂಡ ನಕಾಶೆಯನ್ನು ಪಡೆಯುವುದು. ಮುಂದುವರೆದು, Detailed Surface Plan ನ್ನು ತಯಾರಿಸಿ, Reference Level /Reduced Level ಗಳನ್ನು ದಾಖಲಿಸಿ, ಪ್ರಸ್ತುತ ಭೂಮಟ್ಟವನ್ನು ಘನೀಕರಿಸಿ ದೃಢೀಕರಿಸಿದ ವರದಿಯನ್ನು ಪಡೆಯುವುದು. ಸರ್ವೆ ಕಾರ್ಯಕ್ಕೆ ತಗಲುವ ವೆಚ್ಚವನ್ನು ಅರ್ಜಿದಾರರಿಂದ ಭರಿಸತಕ್ಕದ್ದು.

XII. ಅರ್ಜಿತ ಪ್ರದೇಶದಲ್ಲಿ ಅನಧಿಕೃತ ಗಣಿಗಾರಿಕೆ ನಡೆದಿರುವುದು ಕಂಡುಬಂದಲ್ಲಿ ನಿಯಮಾನುಸಾರ ಕ್ರಮವಹಿಸುವುದು.

XIII. ನಿರ್ದಿಷ್ಟಪಡಿಸಿದ ಉಪಖನಿಜಗಳ ಸಂಬಂಧ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರಂತೆ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿ ರವರು ಅರ್ಜಿತ ಪ್ರದೇಶಕ್ಕೆ ಸಂಬಂಧಿಸಿದ ದೃಢೀಕರಿಸಿದ ದಾಖಲಾತಿ ಮತ್ತು ವರದಿಗಳನ್ನು ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ರವರಿಗೆ ಸೂಕ್ತ ಪ್ರಸ್ತಾವನೆಯೊಂದಿಗೆ ಸಲ್ಲಿಸಿ ಒಪ್ಪಿಗೆ ಪಡೆದ ನಂತರ, ಕಲ್ಲು ಗಣಿಗಾರಿಕೆ ಲೈಸೆನ್ಸ್ ಮಂಜೂರಾತಿಗೆ ನಮೂನೆ-GL ನಲ್ಲಿ ಅಧಿಸೂಚನೆ ಜಾರಿಗೊಳಿಸುವುದು.

XIV. ಅಧಿಸೂಚಿತ ಪಟ್ಟಾ ಪ್ರದೇಶಕ್ಕೆ ಕ್ವಾರಿಯಿಂಗ್ ಲೈಸೆನ್ಸ್ ಕರಾರು ಅಮಲ್ಜಾರಿ ಪೂರ್ವದಲ್ಲಿ ಕಲ್ಲು ಗಣಿಗಾರಿಕೆ ಉದ್ದೇಶಕ್ಕಾಗಿ ಭೂಪರಿವರ್ತಿಸಿರುವ ಆದೇಶ ಪಡೆಯವುದು.

XV. ಮಂಜೂರಾತಿದಾರರು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 8(1-A) ರಂತೆ ಅನುಮೋದಿತ ಕ್ವಾರಿ ಯೋಜನೆ ಮತ್ತು ಸಂಬಂಧಪಟ್ಟ ಪ್ರಾಧಿಕಾರ (SEIAA/MoEF) ದಿಂದ ಪರಿಸರ ಅನುಮತಿ ಪತ್ರ ಪಡೆಯುವುದು.

XVI. ಮಂಜೂರಾತಿದಾರರಿಂದ ಮುಂಗಡ ರಾಜಧನ, ಪರಿಸರ ಸಂರಕ್ಷಣಾ ಶುಲ್ಕ ಹಾಗೂ ಶಾಸನ ಬದ್ಧ ಇನ್ನಿತರೆ ಶುಲ್ಕಗಳನ್ನು ಪಾವತಿಸಿಕೊಂಡ ನಂತರ, ಸಂಬಂದಿಸಿದ ಉಪ ನಿರ್ದೇಶಕರು/ಹಿರಿಯ ಭೂವಿಜ್ಞಾನಿರವರು ನಮೂನೆ-E ರಲ್ಲಿ ಕ್ವಾರಿಯಿಂಗ್ ಲೈಸೆನ್ಸ್ ಕರಾರು ಅಮಲ್ಜಾರಿ ಮಾಡುವುದು.

XVII. ಲೈಸನ್ಸ್‌ದಾರರು ಕ್ವಾರಿಯಿಂಗ್ ಲೈಸೆನ್ಸ್ ಕರಾರು ದಸ್ತಾವೇಜನ್ನು ಸಂಬಂಧಪಟ್ಟ ಉಪ ನೊಂದಣಾಧಿಕಾರಿ ಕಛೇರಿಯಲ್ಲಿ ಕರಾರು ಅಮಲ್ಜಾರಿಯಾದ ದಿನಾಂಕದಿಂದ 90 ದಿನಗಳೊಳಗಾಗಿ ನೋಂದಾಯಿಸುವುದು.

XVIII. ಕ್ವಾರಿಯಿಂಗ್ ಲೈಸೆನ್ಸ್ ಪ್ರದೇಶದಲ್ಲಿ ಗಣಿ ಚಟುವಟಿಕೆ ಪ್ರಾರಂಭಿಸುವ ಪೂರ್ವದಲ್ಲಿ Mines Act, 1952 ರ ಕಲಂ 3 ರಂತೆ ಅಗತ್ಯವಿರುವ ಪ್ರಕರಣಗಳಲ್ಲಿ Director General Mines Safety (DGMS) ರವರಿಂದ ಅನುಮತಿ ಪಡೆಯುವುದು.

XIX. ಕ್ವಾರಿಯಿಂಗ್ ಲೈಸೆನ್ಸ್ ಮಂಜೂರಾತಿ ಪ್ರದೇಶದಲ್ಲಿ ತೆಗೆದ ಉಪಖನಿಜದ ಸಾಗಾಣಿಕೆಗೆ ಖನಿಜ ರವಾನೆ ಪರವಾನಿಗೆ ವಿತರಿಸುವ ಮುನ್ನ ಶೆಡ್ಯೂಲ್-II ರಲ್ಲಿ ನಿಗಧಿಪಡಿಸಿರುವ ರಾಜಧನ, ರಾಜಧನದ ಶೇಕಡ 30 ರಷ್ಟು ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಗೆ (DMF) ವಂತಿಕೆ ಹಾಗೂ ಇತರೆ ಅನ್ವಯಿಕ ಶುಲ್ಕಗಳನ್ನು ಪಾವತಿಸಿಕೊಂಡು ಖನಿಜ ರವಾನೆ ಪರವಾನಿಗೆ ನೀಡಲು ಕ್ರಮವಹಿಸುವುದು.

XX. ದಿನಾಂಕ 12.08.2016ರ ಪೂರ್ವದಲ್ಲಿ ಪಟ್ಟಾ ಜಮೀನುಗಳಲ್ಲಿ ಅಲಂಕಾರಿಕ ಶಿಲೆ ಗಣಿಗಾರಿಕೆಗೆ ಜಾರಿ ಮಾಡಿರುವ ಕಾರ್ಯಾನುಮತಿಗಳನ್ನು (ಮಾನ್ಯ ಸರ್ವೋಚ್ಚ ನ್ಯಾಯಾಲಯ / ಉಚ್ಚ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಹೊರತುಪಡಿಸಿ) ನಿಯಮ 32(10) ರಂತೆ ಕ್ವಾರಿಯಿಂಗ್ ಲೈಸೆನ್ಸ್ ಗಳನ್ನಾಗಿ ಪರಿಗಣಿಸಿ ಸರ್ಕಾರದಿಂದ ಮಾರ್ಗಸೂಚಿ ಜಾರಿಯಾದ 12 ತಿಂಗಳೊಳಗಾಗಿ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿ ರವರು ಕ್ರಮ ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(**ಶಿವಪ್ರಕಾಶ**)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಗಣಿ).

**PR-369**

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 8-B ರಂತೆ ನಿರ್ದಿಷ್ಟ ಮತ್ತು ನಿರ್ದಿಷ್ಟವಲ್ಲದ ಉಪಖನಿಜಗಳ ಗಣಿಗಾರಿಕೆಗೆ ಗುತ್ತಿಗೆ ಮಂಜೂರಾತಿಗೆ ಕೋರಿರುವ ಅರ್ಜಿಗಳ ವಿಲೇವಾರಿ ಸಂಬಂಧ ಮಾರ್ಗಸೂಚಿಗಳು.

**ಓದಲಾಗಿದೆ:**
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 418 ಎಂಎಂಎನ್ 2015 (ಭಾಗ-II), ದಿನಾಂಕ 12.08.2016.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ-ಎಂಎಂಎನ್/205/ 2023, ದಿನಾಂಕ 17.03.2023.
3. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಇವರ ಪತ್ರಗಳ ಸಂಖ್ಯೆ
    a. ಗಭೂಇ/ಉನಿ(ಖ.ಆ)/ಕಗಗು/ತಿ.ನಿ.-01/2023-24/1105, ದಿನಾಂಕ 13.06.2023.
    b. ಗಭೂಇ/ಉನಿ(ಖ.ಆ)/ಕಗಗು/ತಿ.ನಿ.-01/2023-24/4670, ದಿನಾಂಕ 04.09.2023.

*******

**ಪ್ರಸ್ತಾವನೆ:**

ದಿನಾಂಕ 12.08.2016 ರ ಪೂರ್ವದಲ್ಲಿ ಚಾಲ್ತಿಯಲ್ಲಿದ್ದ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 9 ರಂತೆ ನಿದಿ ಷ್ಟ ಉಪಖನಿಜಗಳ ಗಣಿಗಾರಿಕೆಗೆ

ಮತ್ತು ನಿಯಮ 21 ರಂತೆ ನಿರ್ದಿಷ್ಟವಲ್ಲದ ಉಪಖನಿಜಗಳ ಗಣಿಗಾರಿಕೆಗೆ ಗುತ್ತಿಗೆ ಮಂಜೂರಾತಿಗೆ ಅರ್ಜಿಗಳನ್ನು ಸ್ವೀಕರಿಸಲಾಗಿತ್ತು. ಅರ್ಜಿತ ಪ್ರದೇಶಗಳಿಗೆ ಕಂದಾಯ ಮತ್ತು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರಗಳು ಸ್ವೀಕೃತವಾಗದ ಕಾರಣ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ನಿಯಮ 8-B ರನ್ವಯ ಬಾಕಿ ಇರುವ ಎಲ್ಲಾ ಅರ್ಜಿಗಳು ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಅನರ್ಹಗೊಂಡಿರುತ್ತವೆ.

2. ದಿನಾಂಕ 12.08.2016 ರ ಪೂರ್ವದಲ್ಲಿ ಕಲ್ಲು ಗಣಿ ಗುತ್ತಿಗೆ ಕೋರಿ ಸಲ್ಲಿಸಿದ್ದ ಅರ್ಜಿಗಳಿಗೆ ಕಂದಾಯ ಮತ್ತು ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರಗಳು / ವರದಿಗಳು ಸ್ವೀಕೃತವಾಗಿರುವ ಅರ್ಜಿಗಳು ತಿದ್ದುಪಡಿ ನಿಯಮಗಳು, 2016 ರ ನಿಯಮ 8-B(2-d) ಮತ್ತು 8-B(2)(d-1) ಪ್ರಕಾರ ಕಲ್ಲು ಗಣಿ ಗುತ್ತಿಗೆ ಮಂಜೂರಾತಿಗೆ ಅರ್ಹ ಅರ್ಜಿಗಳಾಗಿದ್ದು (Saved Application), ಸದರಿ ಅರ್ಜಿಗಳನ್ನು 8-B(2)(e) ರಲ್ಲಿ ನಿರ್ದಿಷ್ಟಪಡಿಸಿರುವಂತೆ ಗುತ್ತಿಗೆ ಮಂಜೂರಾತಿಗೆ ಪರಿಗಣಿಸಲಾಗಿರುತ್ತದೆ.

3. ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಅಧಿಸೂಚನೆಯಲ್ಲಿ, ದಿನಾಂಕ 17.03.2023 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ನ್ನು ಪ್ರಕಟಿಸಲಾಗಿರುತ್ತದೆ. ಅದರಲ್ಲಿ, ಸದರಿ ತಿದ್ದುಪಡಿ ನಿಯಮಗಳ ನಿಯಮ 8-B ರಲ್ಲಿ ದಿನಾಂಕ 12.08.2016 ರ ಪೂರ್ವದಲ್ಲಿ ಕಲ್ಲು ಗಣಿ ಗುತ್ತಿಗೆ ಮಂಜೂರಾತಿ ಕೋರಿ ಸ್ವೀಕೃತವಾಗಿ ಬಾಕಿ ಇರುವ ಅರ್ಜಿಗಳನ್ನು (ನಿಯಮ 8-B ರಂತೆ ಅನರ್ಹಗೊಂಡಿರುವ ಅರ್ಜಿಗಳು ಹಾಗೂ ನಿಯಮ 8-B (2)(d) ಮತ್ತು ನಿಯಮ 8-B (2)(d-1) ರಡಿ ಗುತ್ತಿಗೆ ಮಂಜೂರಾತಿಗೆ ಪರಿಗಣಿಸಲು ಬಾಕಿ ಇರುವ ಅರ್ಜಿಗಳನ್ನು ಒಳಗೊಂಡಂತೆ) ಗುತ್ತಿಗೆ ಮಂಜೂರಾತಿಗೆ ಪರಿಗಣಿಸಲು ಹಾಗೂ ದಿನಾಂಕ 17.03.2023 ರಿಂದ 24 ತಿಂಗಳೊಳಗೆ ವಿಲೇಪಡಿಸಲು ಅವಕಾಶ ಕಲ್ಪಿಸಲಾಗಿದೆ.

4. ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಪತ್ರದಲ್ಲಿ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರಂತೆ ಪಟ್ಟಾ ಜಮೀನುಗಳಲ್ಲಿ ಉಪಖನಿಜ (ಮರಳು ಹೊರತುಪಡಿಸಿ) ಗಣಿಗಾರಿಕೆಗೆ ಪರವಾನಗಿ ಮಂಜೂರಾತಿಗೆ ಸಂಬಂಧಿಸಿದಂತೆ ನಿಯಮಗಳನ್ನು ಅನುಷ್ಠಾನಗೊಳಿಸು ವಲ್ಲಿ ಸಕ್ಷಮ ಪ್ರಾಧಿಕಾರಗಳು ಅನುಸರಿಸುವ ಕ್ರಮಗಳ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸುವಂತೆ ಕೋರುತ್ತಾ, ಕರಡು ಮಾರ್ಗಸೂಚಿಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

5. ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ತಿದ್ದುಪಡಿ ನಿಯಮಗಳನ್ನು ಅನುಸರಿಸುವಲ್ಲಿ ಕ್ಲಿಷ್ಟತೆ / ಗೊಂದಲಗಳಿಗೆ ಆಸ್ಪದ ನೀಡದಂತೆ ಸಕ್ಷಮ ಪ್ರಾಧಿಕಾರಗಳಿಗೆ ಮಾರ್ಗಸೂಚಿಗಳ ಮೂಲಕ ನಿರ್ದೇಶನ ನೀಡುವುದು ಅವಶ್ಯವೆಂದು ಸರ್ಕಾರವು ಭಾವಿಸಿ, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 8-Bರ ಅನುಷ್ಠಾನಕ್ಕಾಗಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಐ-ಎಂಎಂಎನ್/106/2023, ಬೆಂಗಳೂರು, ದಿನಾಂಕ:11.09.2023.**

6. ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 8-B ರಡಿ ನಿರ್ದಿಷ್ಟ ಮತ್ತು ನಿರ್ದಿಷ್ಟವಲ್ಲದ ಉಪಖನಿಜ ಗುತ್ತಿಗೆ ಮಂಜೂರಾತಿ ಕೋರಿರುವ ಅರ್ಜಿಗಳನ್ನು ಸಕ್ಷಮ ಪ್ರಾಧಿಕಾರಗಳು ನಿಗದಿಪಡಿಸಿದ ಅವಧಿಯೊಳಗೆ ವಿಲೇಪಡಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

**ಮಾರ್ಗಸೂಚಿಗಳು:**

**I.**

(i) ಅರ್ಜಿಯೊಂದಿಗೆ ಸಲ್ಲಿಸಿರುವ ನಿರ್ದೇಶಾಂಕಗಳ ನಕ್ಷೆಯನ್ನು ಸಹಾಯಕ / ಕಿರಿಯ ಅಭಿಯಂತರರು ನಕಾಶೆ ವಿಭಾಗದಲ್ಲಿ ಪರಿಶೀಲಿಸಿ, ನಕ್ಷೆ ಮತ್ತು ನಿರ್ದೇಶಾಂಕ ಗಳನ್ನು ತಾಳೆ ಮಾಡಿ, ವಿಸ್ತೀರ್ಣಕ್ಕೆ ಅನುಗುಣವಾಗಿ ನಕ್ಷೆ ಸಲ್ಲಿಸಿರುವ ಬಗ್ಗೆ ಹಾಗೂ ಗಣಿ ಗುತ್ತಿಗೆ ಮಂಜೂರಾತಿ ನೀಡಲು ಮುಕ್ತವಿರುವ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸುವುದು. ಪರಿಶೀಲಿಸುವ ಸಮಯದಲ್ಲಿ ಅರ್ಜಿತ ಪ್ರದೇಶದ ಮೇಲೆ ನಿರ್ದಿಷ್ಟ ಉಪಖನಿಜಕ್ಕೆ ಹಾಗೂ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ನಿಯಮ 31-ZC ರಂತೆ ಎಂ-ಸ್ಯಾಂಡ್ ತಯಾರಿಸಲು ಕಟ್ಟಡ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಕೋರಿರುವ ಅರ್ಜಿಗಳು ಅತಿವ್ಯಾಪ್ತಿಯಾಗುವ ಬಗ್ಗೆ ಸಂಯುಕ್ತ ನಕ್ಷೆಯನ್ನು ತಯಾರಿಸಿ, ನಿಯಮಾನುಸಾರ ಪರಿಗಣಿಸಲು ವರದಿ ಸಲ್ಲಿಸುವುದು.

(ii) ಭೂವಿಜ್ಞಾನಿಯವರು ಮತ್ತು ಸಹಾಯಕ / ಕಿರಿಯ ಅಭಿಯಂತರರು ಜಂಟಿಯಾ ಸ್ಥಳ ಪರಿಶೀಲನೆ ನಡೆಸಿ ನಮೂನೆ-S ನಲ್ಲಿ ತಾಂತ್ರಿಕ ವರದಿಯನ್ನು ಭೂವಿಜ್ಞಾನಿಯವರು ಸಲ್ಲಿಸುವುದು. ಸದರಿ ತಾಂತ್ರಿಕ ವರದಿಯನ್ನು ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿ ರವರು ಸ್ಪಷ್ಟ ಅಭಿಪ್ರಾಯದೊಂದಿಗೆ ದೃಢೀಕರಿಸುವುದು.

(iii) ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 8(5) ರಂತೆ ನಿರಾಕ್ಷೇಪಣಾ ಪತ್ರ / ವರದಿಗಳನ್ನು ಪಡೆಯಲು ಸಕ್ಷಮ ಪ್ರಾಧಿಕಾರಿಯು ಕ್ರಮ ವಹಿಸುವುದು.

(iv) ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 8(5) ರಂತೆ ಕಂದಾಯ ಅಥವಾ ಅರಣ್ಯ ಇಲಾಖೆ ಅಥವಾ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಸಂಬಂಧ ವ್ಯತಿರಿಕ್ತವಾಗಿ ವರದಿ / ಅಭಿಪ್ರಾಯಗಳು ಸ್ವೀಕೃತವಾದಲ್ಲಿ, ನಿರ್ದಿಷ್ಟ ಉಪಖನಿಜಗಳಿಗೆ ಸಂಬಂಧಿಸಿದ ಗುತ್ತಿಗೆ ಕೋರಿದ ಅರ್ಜಿಗಳನ್ನು ಆಯುಕ್ತರು/ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ನಿರ್ದಿಷ್ಟವಲ್ಲದ ಉಪಖನಿಜಗಳಿಗೆ ಸಂಬಂಧಿಸಿದ ಗುತ್ತಿಗೆ ಕೋರಿದ ಅರ್ಜಿಗಳನ್ನು ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರು /ಹಿರಿಯ ಭೂವಿಜ್ಞಾನಿ ರವರ ಹಂತದಲ್ಲಿಯೇ ತಿರಸ್ಕರಿಸುವುದು.

(v) ಅರ್ಜಿದಾರನು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 8(4) ರಂತೆ ಅನಧಿಕೃತ ಕಲ್ಲುಗಣಿ ಚಟುವಟಿಕೆ ನಡೆಸಿ ದಂಡನೀಯ ಶಿಕ್ಷೆಗೆ ಒಳಪಟ್ಟಿದ್ದಲ್ಲಿ, ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಅರ್ಹನಾಗಿರತಕ್ಕದ್ದಲ್ಲ.

(vi) ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 15(1) ರಂತೆ ವೈಯಕ್ತಿಕ ಅರ್ಜಿದಾರರು ಗರಿಷ್ಟ 10-00 ಎಕರೆ ಮತ್ತು ಖನಿಜಾಧಾರಿತ ಕೈಗಾರಿಕೆ ಹೊಂದಿರುವ ಅರ್ಜಿದಾರರು ಗರಿಷ್ಟ 50-00 ಎಕರೆ ವಿಸ್ತೀರ್ಣಕ್ಕಿಂತ ಹೆಚ್ಚಿನ ಗುತ್ತಿಗೆ ಪ್ರದೇಶವನ್ನು ಹೊಂದತಕ್ಕದ್ದಲ್ಲ. ಗರಿಷ್ಟ ವಿಸ್ತೀರ್ಣದ ಪ್ರಮಾಣವನ್ನು ನಿಯಮ 15(3) ರಲ್ಲಿ ನಿರ್ದಿಷ್ಟಪಡಿಸಿರುವಂತೆ ಪರಿಗಣಿಸುವುದು.

(vii) ಕಲ್ಲುಗಣಿ ಗುತ್ತಿಗೆ ಕೋರಿ ಸಲ್ಲಿಸಿರುವ ವೈಯಕ್ತಿಕ/ಸಂಸ್ಥೆ/ಪಾಲುದಾರಿಕೆ/ಕಂಪನಿಯ ಹೆಸರಿನಲ್ಲಿ ಸಲ್ಲಿಸಿರುವ ಅರ್ಜಿಗಳ ವಿವರಗಳನ್ನು ಹಾಗೂ ಈಗಾಗಲೇ ಹೊಂದಿರುವ ಕಲ್ಲುಗಣಿ ಗುತ್ತಿಗೆಗಳ ವಿವರಗಳನ್ನು ಒಳಗೊಂಡಂತೆ ಅರ್ಜಿದಾರರು ನೋಟರಿ ಮಾಡಿಸಿದ ಮಾಹಿತಿಯ ಅಫಿಡವಿಟನ್ನು ಸಕ್ಷಮ ಪ್ರಾಧಿಕಾರಿಗಳು ಪಡೆದು ಪರಿಶೀಲಿಸಿ ನಿಯಮಾನುಸಾರ ಕ್ರಮ ವಹಿಸುವುದು.

(viii) ಅರ್ಜಿದಾರರು ವೈಯಕ್ತಿಕ/ಪಾಲುದಾರಿಕೆ/ಸಂಸ್ಥೆ/ಕಂಪನಿ ಕುಟುಂಬದ ಸದಸ್ಯರ ಹೆಸರಿನಲ್ಲಿ ಈಗಾಗಲೇ ಗಣಿ/ಕಲ್ಲುಗಣಿ ಗುತ್ತಿಗೆ ಹೊಂದಿದ್ದಲ್ಲಿ, ಗುತ್ತಿಗೆ/ಲೈಸೆನ್ಸ್ ಗಳ

ವಿವರಗಳು ಮತ್ತು ಬೇಬಾಕಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿ ರವರಿಂದ ಪಡೆದು ಸಲ್ಲಿಸುವುದು.

(ix) ದಿನಾಂಕ 12.08.2016 ರ ಪೂರ್ವದಲ್ಲಿ ಚಾಲ್ತಿಯಲ್ಲಿದ್ದ ನಿಯಮ 8-B ಅಥವಾ ನಂತರದ ತಿದ್ದುಪಡಿ ನಿಯಮಗಳು, 2016ರ ಅಧ್ಯಾಯ IV-A ರಂತೆ ಕಲ್ಲುಗಣಿ ಗುತ್ತಿಗೆ ಕೋರಿರುವ ಅರ್ಜಿಯ ಪ್ರದೇಶದಲ್ಲಿ ಟೆಂಡರ್ ಕಂ-ಹರಾಜು ಮೂಲಕ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ನೀಡಲು ಇಲಾಖೆಯಿಂದ ಅಧಿಸೂಚನೆ ಜಾರಿಯಾಗಿದ್ದಲ್ಲಿ, ಸದರಿ ಪ್ರದೇಶದಲ್ಲಿ ನಿಯಮ 31-C ರಡಿ ಹರಾಜು ಮೂಲಕ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಕ್ರಮ ವಹಿಸುವುದು. ಒಂದು ವೇಳೆ ಅಂತಹ ಅಧಿಸೂಚಿತ ಪ್ರದೇಶದ ಮೇಲೆ ಯಾವುದೇ ಕಲ್ಲುಗಣಿ ಗುತ್ತಿಗೆ ಕೋರಿರುವ ಅರ್ಜಿಗಳು ಅತಿವ್ಯಾಪ್ತಿಯಾಗಿದ್ದಲ್ಲಿ ಅಂತಹ ಅರ್ಜಿಗಳನ್ನು ಸಕ್ಷಮ ಪ್ರಾಧಿಕಾರವು ತಿರಸ್ಕರಿಸುವುದು

**II.** ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಕೋರಿಕೆ ಅರ್ಜಿಗಳನ್ನು ಈ ಕೆಳಕಂಡ ಆದ್ಯತೆಯನುಸಾರ ಪರಿಗಣಿಸುವುದು.

A. ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ನಿಯಮ 8-B(2)(a), (b), (c), (d) and (d-1) ರಂತೆ ರಕ್ಷಿಸಲ್ಪಟ್ಟಿದ್ದ (saved applications) ಅರ್ಜಿಗಳನ್ನು ಪ್ರಥಮ ಆದ್ಯತೆಯಡಿ ಪರಿಗಣಿಸುವುದು.

B. ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ನಿಯಮ 31-ZC ರಂತೆ ಎಂ-ಸ್ಯಾಂಡ್ ತಯಾರಿಕೆ ಉದ್ದೇಶಕ್ಕಾಗಿ ಕಟ್ಟಡ ಕಲ್ಲುಗಣಿ ಗುತ್ತಿಗೆ ಕೋರಿರುವ ಅರ್ಜಿಗಳನ್ನು ಎರಡನೇ ಆದ್ಯತೆಯಡಿ ಪರಿಗಣಿಸುವುದು.

C. ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ನಿಯಮ 8-B(1) ರಂತೆ ಅನರ್ಹಗೊಂಡಿರುವ ಅರ್ಜಿಗಳು ಪ್ರಸ್ತುತ ತಿದ್ದುಪಡಿ ನಿಯಮಗಳು, 2023 ರಂತೆ ಪರಿಗಣಿತವಾಗಿರುವ ಅರ್ಜಿಗಳನ್ನು ಮೂರನೇ ಆದ್ಯತೆಯಡಿ ಪರಿಗಣಿಸುವುದು.

D. ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023ರ ನಿಯಮ 31-ZC ರಂತೆ ಎಂ-ಸ್ಯಾಂಡ್ ತಯಾರಿಕೆ ಉದ್ದೇಶಕ್ಕಾಗಿ ಕಟ್ಟಡ ಕಲ್ಲುಗಣಿ ಗುತ್ತಿಗೆ ಕೋರಿರುವ ಅರ್ಜಿಗಳನ್ನು ನಾಲ್ಕನೇ ಆದ್ಯತೆಯಡಿ ಪರಿಗಣಿಸುವುದು.

**III.** ಕಂಡಿಕೆ **II**(C) ರಲ್ಲಿ ತಿಳಿಸಿರುವಂತೆ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ರ ನಿಯಮ 8-B(1) ರಂತೆ ಅನರ್ಹಗೊಂಡಿರುವ ಅರ್ಜಿಗಳು ಪ್ರಸ್ತುತ ತಿದ್ದುಪಡಿ ನಿಯಮಗಳು, 2023 ರಂತೆ ಪರಿಗಣಿತವಾಗಿರುವ ಅರ್ಜಿಗಳ ಪ್ರದೇಶಗಳು ಒಂದಕ್ಕೊಂದು ಅತಿವ್ಯಾಪ್ತಿಗೊಂಡಿದ್ದಲ್ಲಿ ದಿ:12-08-2016ರ ಪೂರ್ವದಲ್ಲಿ ಚಾಲ್ತಿಯಲ್ಲಿದ್ದ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮ-12 (ಅಲಂಕಾರಿಕ ಶಿಲೆ) ಮತ್ತು ನಿಯಮ-23 (ನಿರ್ಧಿಷ್ಟವಲ್ಲದ ಉಪಖನಿಜ)ರಲ್ಲಿ ನಿಗಧಿಪಡಿಸಲಾಗಿದ್ದ ಆದ್ಯತೆ ಅನುಸಾರ ಅರ್ಜಿಗಳನ್ನು ಪರಿಶೀಲಿಸಿ, ಪರಿಗಣಿಸಿ ವಿಲೇವಾರಿ ಮಾಡುವುದು.

i. If any disputes arise between the applicants in case of Specified Minor Mineral Director, Mines and Geology may hear the matter and disposed accordingly.

ii. If any disputes arise between the applicants in case of Non-Specified Minor Mineral jurisdictional Deputy Director / Senior Geologist, Mines and Geology of the concerned District may hear the matter and disposed accordingly.

**IV.** ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 8(5) ರಂತೆ ನಿರಾಕ್ಷೇಪಣಾ ಪತ್ರಗಳು ಮತ್ತು ತಾಂತ್ರಿಕ ವರದಿ ಸ್ವೀಕೃತಗೊಂಡು, ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಅರ್ಹವಾದ ಅರ್ಜಿತ ಪ್ರದೇಶದ ವಿಸ್ತೀರ್ಣಕ್ಕೆ ಅನುಗುಣವಾಗಿ ಪ್ರತಿ ಎಕರೆಗೆ ಮೋಜಣಿ ಶುಲ್ಕ ₹ 2,000/- ಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಪಾವತಿಸಿದ ನಂತರ ಗಣಿ ಮತ್ತು ಭೂವಿಜ್ಞಾನ ಇಲಾಖೆ ಮತ್ತು ಭೂದಾಖಲೆಗಳ ಇಲಾಖೆಯ ಸಕ್ಷಮ ಅಧಿಕಾರಿಗಳು ಹಾಗೂ ಅರ್ಜಿದಾರರ ಸಮಕ್ಷಮದಲ್ಲಿ ಜಂಟಿ ಮೋಜಣಿ ಕೈಗೊಂಡು DGPS ಮತ್ತು Drone ಉಪಕರಣದ ಮೂಲಕ ಗಡಿ ಬಾಂದುಗಳ ಅಕ್ಷಾಂಶ-ರೇಖಾಂಶಗಳನ್ನು ದಾಖಲಿಸಿ ಗಡಿ ಗುರುತುಗಳನ್ನು ಸ್ಥಾಪಿಸಿ, ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿದ ಜಂಟಿ ಮೋಜಣಿ ವರದಿ ಮತ್ತು DGPS ನಿರ್ದೇಶಾಂಕಗಳನ್ನು ಒಳಗೊಂಡ ನಕಾಶೆಯನ್ನು ಪಡೆಯುವುದು. ಮುಂದುವರೆದು, Detailed Surface Plan ನ್ನು ತಯಾರಿಸಿ, Reference Level /Reduced Level ಗಳನ್ನು ದಾಖಲಿಸಿ, ಪ್ರಸ್ತುತ ಭೂಮಟ್ಟವನ್ನು ಘನೀಕರಿಸಿ ದೃಢೀಕರಿಸಿದ ವರದಿಯನ್ನು ಪಡೆಯುವುದು. ಸರ್ವೆ ಕಾರ್ಯಕ್ಕೆ ತಗಲುವ ವೆಚ್ಚವನ್ನು ಅರ್ಜಿದಾರರು ಭರಿಸತಕ್ಕದ್ದು.

**V.** ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 8-A ರಂತೆ ಅರ್ಜಿತ ಪ್ರದೇಶದ ಖನಿಜದ ಲಭ್ಯತೆ ಮತ್ತು ವೈಜ್ಞಾನಿಕ ಗಣಿಗಾರಿಕೆಗೆ ಕಾರ್ಯಸಾಧುವಿರುವ ಬಗ್ಗೆ ಭೂವಿಜ್ಞಾನಿರವರಿಂದ ತಾಂತ್ರಿಕ ವರದಿಯನ್ನು ಪಡೆದು, ಪರಿಶೀಲಿಸಿ, ಉಪ ನಿರ್ದೇಶಕರು / ಹಿರಿಯ ಭೂವಿಜ್ಞಾನಿಯವರು ಅಭಿಪ್ರಾಯ ದಾಖಲಿಸುವುದು.

**VI.** ಮೇಲಿನ ಎಲ್ಲಾ ದಾಖಲೆ ಮತ್ತು ಅಂಶಗಳು ಪೂರಕವಾಗಿದ್ದಲ್ಲಿ, ನಿರ್ದಿಷ್ಟ ಮತ್ತು ನಿರ್ದಿಷ್ಟವಲ್ಲದ ಉಪಖನಿಜಗಳ ಸಂಬಂಧ ಅರ್ಜಿದಾರರಿಗೆ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಸಕ್ಷಮ ಪ್ರಾಧಿಕಾರದಿಂದ ಅಧಿಸೂಚನೆ ಜಾರಿ ಮಾಡುವುದು.

**VII.** ಮಂಜೂರಾತಿದಾರರು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 8(1-A) ರಂತೆ ಅನುಮೋದಿತ ಕ್ವಾರಿ ಯೋಜನೆ ಮತ್ತು ಸಂಬಂಧಪಟ್ಟ ಪ್ರಾಧಿಕಾರ (SEIAA/MoEF) ದಿಂದ ಪರಿಸರ ಅನುಮತಿ ಪತ್ರ ಪಡೆಯುವುದು.

**VIII.** ಮಂಜೂರಾತಿದಾರರಿಂದ Upfront Payment ನ್ನು Bank Guarantee ಮೂಲಕ ಪಡೆಯುವುದು ಮತ್ತು ಮುಂಗಡ ರಾಜಧನ, ಪರಿಸರ ಸಂರಕ್ಷಣಾ ಶುಲ್ಕ ಹಾಗೂ ಅನ್ವಯಿಕ ಇನ್ನಿತರೆ ಶುಲ್ಕಗಳನ್ನು ಪಾವತಿಸಿಕೊಂಡು ನಮೂನೆ-E ರಲ್ಲಿ ಕಲ್ಲುಗಣಿ ಗುತ್ತಿಗೆ ಕರಾರು ದಸ್ತಾವೇಜು ಅಮಲ್ಜಾರಿ ಮಾಡುವುದು.

**IX.** ಕಲ್ಲುಗಣಿ ಗುತ್ತಿಗೆದಾರರು ಕರಾರು ದಸ್ತಾವೇಜನ್ನು ಸಂಬಂಧಪಟ್ಟ ಉಪ ನೊಂದಣಾಧಿಕಾರಿ ಕಛೇರಿಯಲ್ಲಿ ಕರಾರು ಅಮಲ್ಜಾರಿಯಾದ ದಿನಾಂಕದಿಂದ 90 ದಿನಗಳೊಳಗಾಗಿ ನೋಂದಾಯಿಸಿ ಸಲ್ಲಿಸಿದ ನಂತರ ಇಲಾಖೆಯ ILMS ತಂತ್ರಾಂಶದಲ್ಲಿ ನೋಂದಾಯಿಸುವುದು.

**X.** ಕಲ್ಲುಗಣಿ ಗುತ್ತಿಗೆ ಪ್ರದೇಶದಲ್ಲಿ ಗಣಿ ಚಟುವಟಿಕೆ ಪ್ರಾರಂಭಿಸುವ ಪೂರ್ವದಲ್ಲಿ Mines Act, 1952 ರ ಕಲಂ 3 ರಂತೆ ಅಗತ್ಯವಿರುವ ಪ್ರಕರಣಗಳಲ್ಲಿ Director General Mines Safety (DGMS) ರವರಿಂದ ಅನುಮತಿ ಪಡೆಯುವುದು.

**XI.** ಕಲ್ಲುಗಣಿ ಗುತ್ತಿಗೆ ಪ್ರದೇಶದಲ್ಲಿ ತೆಗೆದ ಉಪಖನಿಜದ ಸಾಗಾಣಿಕೆಗೆ ಖನಿಜ ರವಾನೆ ಪರವಾನಿಗೆ ವಿತರಿಸುವ ಮುನ್ನ ಶೆಡ್ಯೂಲ್-II ರಲ್ಲಿ ನಿಗದಿಪಡಿಸಿರುವ ರಾಜಧನ, ಹೆಚ್ಚುವರಿ ಪಾವತಿ,

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ ವಂತಿಕೆ (DMF) ಹಾಗೂ ಇತರೆ ಅನ್ವಯಿಕ ಶುಲ್ಕಗಳನ್ನು ಪಾವತಿಸಿಕೊಂಡು ಖನಿಜ ರವಾನೆ ಪರವಾನಿಗೆ ನೀಡಲು ಕ್ರಮವಹಿಸುವುದು.

**XII.** ದಿನಾಂಕ 12.08.2016 ರ ಪೂರ್ವದಲ್ಲಿ ಸ್ವೀಕೃತವಾಗಿರುವ ಎಲ್ಲಾ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಕೋರಿಕೆ ಅರ್ಜಿಗಳನ್ನು ದಿನಾಂಕ 17.03.2023 ರಿಂದ 24 ತಿಂಗಳ ಒಳಗಾಗಿ ವಿಲೇವಾರಿ ಮಾಡುವುದು.

**XIII.** ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳನ್ವಯ ಕಲ್ಲುಗಣಿ ಗುತ್ತಿಗೆ ಕೋರಿ ಸಲ್ಲಿಸಲಾದ ಅರ್ಜಿಗಳನ್ನು ವಿಲೇವಾರಿ ಮಾಡುವ ಸಂಬಂಧ ಸಕ್ಷಮ ಪ್ರಾಧಿಕಾರವು ಕೈಗೊಳ್ಳುವ ನಿರ್ಣಯವು ಅಂತಿಮವಾಗಿದ್ದು, ಅರ್ಜಿದಾರನು ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಕೋರಿಕೆಯನ್ನು ಹಕ್ಕು ಎಂಬುದಾಗಿ ಭಾವಿಸತಕ್ಕದ್ದಲ್ಲ.

**XIV.** ಮೇಲೆ ತಿಳಿಸಿರುವ ಮಾರ್ಗಸೂಚಿಗಳನ್ನು ಅನುಸರಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ CI 106 MMN 2023, ಬೆಂಗಳೂರು, ದಿನಾಂಕ:11.09.2023 ರಲ್ಲಿ ನಿಗದಿಪಡಿಸಿರುವಂತೆ ಸಕ್ಷಮ ಪ್ರಾಧಿಕಾರವು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2023 ರ ನಿಯಮ 8-B ರಡಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ನೀಡಲು ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(**ಶಿವಪ್ರಕಾಶ**)
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಗಣಿ).

**PR-370**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು